ಸಂಪಾದಕರು :
ಎಂ.ಎಸ್. ವಿಕಾಸ್

# ಜನತಾವಾಣಿ

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ಶುಕ್ರವಾರ, ಮಾರ್ಚ್ 15, 2024
ದಾವಣಗೆರೆ, ಪುಟ : 6 ರೂ : 5
ಸಂಪುಟ : 50 ಸಂಚಿಕೆ : 303 RNI : 27369/75

50 1974 2023

janathavani@mac.com
www.janathavani.com
08192 254736 91642 99999

# ಜಿಲ್ಲಾ ಬಿಜೆಪಿಯಲ್ಲಿ ಭುಗಿಲೆದ್ದ ಬಂಡಾಯ

## ರವಿಂದ್ರನಾಥ್ ಮನೆಯಲ್ಲಿ ಸಭೆ, ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ ಬದಲಾವಣೆಗೆ ಒತ್ತಾಯ

ದಾವಣಗೆರೆ, ಮಾ.14- ಸಂಸದ ಜಿ.ಎಂ. ಸಿದ್ದೇಶ್ವರ ಅವರ ಪತ್ನಿ ಗಾಯತ್ರಿ ಸಿದ್ದೇಶ್ವರ ಅವರಿಗೆ ಲೋಕಸಭಾ ಚುನಾವಣೆಗೆ ಟಿಕೆಟ್ ಘೋಷಣೆಯಾಗುತ್ತಿದ್ದಂತೆಯೇ ಬಿಜೆಪಿಯಲ್ಲಿ ಬಂಡಾಯ ಭುಲೆದ್ದಿದೆ.

ಗುರುವಾರ ಶಿರಮಗೊಂಡಹಳ್ಳಿ ಯಲ್ಲಿರುವ ಮಾಜಿ ಸಚಿವ ಎಸ್.ಎ. ರವೀಂದ್ರನಾಥ್ ಅವರ ನಿವಾಸದಲ್ಲಿ ಬಂಡಾಯದ ಬಣ ಸಭೆ ನಡೆಸಿದ್ದು, ಸಿದ್ದೇಶ್ವರ ಕುಟುಂಬಕ್ಕೆ ಟಿಕೆಟ್ ನೀಡಿದ್ದನ್ನು ತೀವ್ರವಾಗಿ ವಿರೋಧಿಸಿ, ದಾವಣಗೆರೆ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯನ್ನು ಬದಲಿಸಲು ವರಿಷ್ಠರ ಮೇಲೆ ಒತ್ತಾಯ ಹೇರಲು ನಿರ್ಧರಿಸಲಾಯಿತು.

ಸಭೆಯಲ್ಲಿ ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ, ಮಾಜಿ ಶಾಸಕ ಟಿ.ಗುರುಸಿದ್ದನಗೌಡ, ಟಿ ಕೆ ಟ್ (2ನೇ ಪುಟಕ್ಕೆ)

### ಬೇಸಿಗೆಯಲ್ಲಿ ಎಡವಿದ್ದ ಕಲ್ಲನ್ನು ಮಳೆಗಾಲದಲ್ಲಿ ಕಿತ್ತು ಹಾಕಬೇಕು: ಎಸ್‌ಎಆರ್

'ಬೇಸಿಗೆಯಲ್ಲಿ ಎಡವಿದ್ದ ಕಲ್ಲನ್ನು ಮಳೆಗಾಲದಲ್ಲಿ ಕಿತ್ತು ಹಾಕಬೇಕು ಎಂಬ ಮಾತಿದೆ. ಅದರಂತೆ ಈಗ ಕಲ್ಲು ಕಿತ್ತಾಕಲು ಅವಕಾಶ ಬಂದಿದೆ, ನೋಡೋಣ' ಎಂದು ಎಸ್.ಎ. ರವೀಂದ್ರನಾಥ್ ಹೇಳಿದ್ದಾರೆ. ಅಭ್ಯರ್ಥಿಯನ್ನು (2ನೇ ಪುಟಕ್ಕೆ)

### ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆಗೆ ಯತ್ನ

ಗಾಯತ್ರಿ ಸಿದ್ದೇಶ್ವರ್ ಅವರಿಗೆ ಟಿಕೆಟ್ ಘೋಷಣೆಯಾಗಿದ್ದಕ್ಕೆ ಅಸಮಾಧಾನಗೊಂಡ ಪಕ್ಷದ ಕಾರ್ಯಕರ್ತನೊಬ್ಬ ಮೈ ಮೇಲೆ ಪೆಟ್ರೋಲ್ ಸುರಿದುಕೊಂಡು (2ನೇ ಪುಟಕ್ಕೆ)

# ಸಾಕು ಪ್ರಾಣಿಗಳ ಪರಿಶೀಲನೆಗೆ ಆದೇಶ

ನವದೆಹಲಿ, ಮಾ. 14 – ಒಂದೂವರೆ ವರ್ಷದ ಹೆಣ್ಣು ಮಗುವನ್ನು ನಾಯಿಗಳ ಹಿಂಡು ಕೊಂದು ಹಾಕಿರುವ ಹಿನ್ನೆಲೆಯಲ್ಲಿ, ದೆಹಲಿಯ ತುಘಲಕ್ ಲೇನ್ ಪ್ರದೇಶದ ನಿವಾಸಿಗಳು ಸಾಕಿರುವ ಪ್ರಾಣಿಗಳ ಸ್ವರೂಪದ ಬಗ್ಗೆ ತನಿಖೆ ನಡೆಸುವಂತೆ ದೆಹಲಿ ಹೈಕೋರ್ಟ್ ಆದೇಶಿಸಿದೆ. ಪೊಲೀಸರು ಈ ಬಗ್ಗೆ ಮಾರ್ಚ್ 19ರ (2ನೇ ಪುಟಕ್ಕೆ)


# ರಾಗಿ ಖರೀದಿ ಕೇಂದ್ರಕ್ಕೆ ಚಾಲನೆ

ದಾವಣಗೆರೆ, ಮಾ.14- ಮುಂಗಾರು ಹಂಗಾಮಿನಲ್ಲಿ ರಾಗಿ ಬೆಳೆದ ರೈತರಿಂದ ನೇರವಾಗಿ ಬೆಂಬಲ ಬೆಲೆಯಲ್ಲಿ ರಾಗಿ ಖರೀದಿ ಮಾಡಲು ನಗರದ ಎ.ಪಿ.ಎಂ.ಸಿ. ಗೋದಾಮಿನಲ್ಲಿ ರಾಗಿ ಖರೀದಿ ಕೇಂದ್ರಕ್ಕೆ ಇಂದು ಜಿಲ್ಲಾಧಿಕಾರಿ ಡಾ. ಎಂ.ವಿ. (2ನೇ ಪುಟಕ್ಕೆ)












**ಕರ್ನಾಟಕ ಹೌಸಿಂಗ್ ಬೋರ್ಡ್ (KHB) ಸೈಟ್ ಮಾರಾಟಕ್ಕೆ**
ಕಮರ್ಷಿಯಲ್ ಆಗುವಂತಹ
1) 12x18 ಮೀಟರ್ (40X60) ಉತ್ತರ 100 ಅಡಿ ರಸ್ತೆಗೆ (88 ಲಕ್ಷ)
2) 9x12 ಮೀಟರ್ (30x40) ಬನ್ನಿಕೋಡ್ 60 ಅಡಿ ರಸ್ತೆಗೆ (40 ಲಕ್ಷ)
ಕಿರಣ್ ಬೂಸ್ನೂರ್ : 98440 63409
ರಿಜಿಸ್ಟರ್ ಖರ್ಚು+ಕಮೀಷನ್ ಸೇರಿ

**ಬೇಕಾಗಿದ್ದಾರೆ**
ಬಟ್ಟೆ ಅಂಗಡಿಗೆ ಸೇಲ್ಸ್ ಮೆನ್ ಮತ್ತು ಸೇಲ್ಸ್ ಗರ್ಲ್ಸ್ ಬೇಕಾಗಿದ್ದಾರೆ. ಗ್ರಾಮೀಣ ಪ್ರದೇಶದವರಿಗೆ ಅವಕಾಶ. ವೇತನದೊಂದಿಗೆ ಊಟ, ವಸತಿ ಸೌಲಭ್ಯವಿರುತ್ತದೆ. ಸಂಪರ್ಕಿಸಿ :
98442-94446

**ಸೈಟುಗಳು ಮಾರಾಟಕ್ಕಿವೆ**
LIC ಕಾಲೋನಿ ನೂತನ ಕಾಲೇಜ್ ಹಿಂಭಾಗ
40x50 East, 40x50 South, 40x60 North, 40x30 South, 25x30 South, 30x50 Corner
ಐನಳ್ಳಿ ಚನ್ನಬಸಪ್ಪ ಏಜೆಂಟ್
99166 12110

**ಮನೆಗಳು ಲೀಸ್‌ಗೆ ಇವೆ**
ವಿದ್ಯಾನಗರ, ತರಳಬಾಳು ಬಡಾವಣೆ, ಆಂಜನೇಯ ಬಡಾವಣೆಯಲ್ಲಿ ಸಿಂಗಲ್ ಬೆಡ್ ರೂಮ್, ಡಬಲ್ ಬೆಡ್ ರೂಮ್, ಮೂರು ಬೆಡ್ ರೂಮ್ ಮನೆಗಳು, ಮೊದಲನೇ ಮಹಡಿಗಳಲ್ಲಿ (ಸಸ್ಯಹಾರಿಗಳಿಗೆ ಮಾತ್ರ)
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**OM SAI HOME MADE PRODUCTS**
ನಮ್ಮ ಮನೆಯಲ್ಲೇ ತಯಾರಿಸಿದ ಮಸಾಲೆ ಪದಾರ್ಥಗಳು, ಸಾಂಬಾರ್ ಪುಡಿ, ದನಿಯಾ, ರಸಂ ಪುಡಿ, ಗರಂ ಮಸಾಲಾ ಹಾಗೂ ಪುಳಿಯೋಗರೆ ಪುಡಿ ದೊರೆಯುತ್ತವೆ. ಟೂರ್ಸ್ & ಟ್ರಾವೆಲ್ಸ್‌ಗೆ ವಾಹನಗಳು ಬಾಡಿಗೆಗೆ ದೊರೆಯುತ್ತವೆ.
91102 74329, 91646 41164

**ಸೈಟುಗಳು ಮಾರಾಟಕ್ಕಿದೆ**
ವಾಜಪೇಯಿ ಲೇಔಟ್ ಪಕ್ಕ ಗೀತಂ ಕಾಲೇಜು ಸುತ್ತ-ಮುತ್ತ ಹೊಸ ಬಡಾವಣೆಗಳಲ್ಲಿ 30x35 ಉತ್ತರ-ಪಶ್ಚಿಮ ಕಾರ್ನರ್, 60 ಅಡಿ ರಸ್ತೆಗೆ ಹೊಂದಿಕೊಂಡು 28x30 ಪಶ್ಚಿಮ ಅಕ್ಕ-ಪಕ್ಕ 30x40 ಪೂರ್ವ, 30x40 ದಕ್ಷಿಣ
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
91132 85992

**ಬೇಕಾಗಿದ್ದಾರೆ**
ಸೆಲ್ಫ್ ಸರ್ವೀಸ್ ಹೋಟೆಲ್‌ನಲ್ಲಿ ಇಡ್ಲಿ ಕೌಂಟರ್ ನಡೆಸಲು ನುರಿತ ಹುಡುಗರು ಕೆಲಸಕ್ಕೆ ಬೇಕಾಗಿದ್ದಾರೆ. ಕೆಲಸದ ಸಮಯ ಸಂಜೆ: 4PM - 10PM ಸಂಪರ್ಕಿಸಿ :
95388 96927

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಸರ್ವೀಸ್‌ಗಾಗಿ ಹಾಗೂ ಇತರೆ ಕೆಲಸಕ್ಕಾಗಿ ಅನುಭವವುಳ್ಳವರು ಬೇಕಾಗಿದ್ದಾರೆ.
ಸಂಪರ್ಕಿಸಿ :
99011 60717

**ಬೇಕಾಗಿದ್ದಾರೆ**
Telecaller / ಟೆಲಿಕಾಲರ್ಸ್
ಯುವತಿಯರು / Female
Education : 12th PUC/ degree
ಕನ್ನಡ, ಇಂಗ್ಲೀಷ್ ಭಾಷಾಜ್ಞಾನವಿರಬೇಕು
81052 25411

**FLAT FOR LEASE**
2 BHK, North facing
1325 Sq.ft.
Address : AM Apartment, Nainika Prime Rose, Vidyanagar City Bus Last Stop, Davanagere.
89519 38228

**ಮನೆ ಬಾಡಿಗೆಗಿದೆ**
ಹೊಸ ಮನೆ ಪೂರ್ವ ದಿಕ್ಕಿನ ವಾಸ್ತು ಇರುವ ಗ್ರೌಂಡ್ 1ನೇ ಫ್ಲೋರ್, ಸೋಲಾರ್, ನಲ್ಲಿ, ಬೋರ್, 2 ಬೆಡ್ ರೂಮ್ ಮನೆ, ಶಿವಕುಮಾರ ಸ್ವಾಮಿ ನಗರ, 2ನೇ ಹಂತ ಹದಡಿ ರಸ್ತೆ, ಸಂಪರ್ಕಿಸಿ :
94481 78626

**ಬೇಕಾಗಿದ್ದಾರೆ**
ಹೋಟೆಲ್‌ನಲ್ಲಿ ಕೆಲಸ ಮಾಡಲು ಕ್ಲೀನರ್ (ಪಾತ್ರೆ ತೊಳೆಯಲು) ಬೇಕಾಗಿದ್ದಾರೆ. ಸ್ಥಳ - ಜಯನಗರ 'ಬಿ' ಬ್ಲಾಕ್. ಸಂಪರ್ಕಿಸಿ :
97420 97140


# ಬಿಜೆಪಿಯಲ್ಲಿ ಭುಗಿಲೆದ್ದ ಬಂಡಾಯ, ಅಭ್ಯರ್ಥಿ ಬದಲಾವಣೆಗೆ ಒತ್ತಾಯ

**(1ನೇ ಪುಟದಿಂದ)** ಆಕಾಂಕ್ಷಿಯೂ ಆಗಿದ್ದ ಆರ್ಕೆ ಆಸ್ಪತ್ರೆಯ ರವಿಕುಮಾರ್, ಮಾಜಿ ಶಾಸಕ ಬಸವರಾಜ ನಾಯ್ಕ, ಮಾಜಿ ಮೇಯರ್ ಬಿ.ಜಿ. ಅಜಯ್ ಕುಮಾರ್, ಲೋಕಿಕೆರೆ ನಾಗರಾಜ್, ಮಾಡಾಳ್ ಮಲ್ಲಿಕಾರ್ಜುನ್ ಸೇರಿದಂತೆ ಹಲವರು ಸಭೆಯಲ್ಲಿ ಪಾಲ್ಗೊಂಡಿದ್ದರು. ಸಿದ್ದೇಶ್ವರ ಅವರು ಪಕ್ಷದ ವರಿಷ್ಠರಿಗೆ ತಪ್ಪು ಮಾಹಿತಿ ನೀಡಿ ಟಿಕೆಟ್ ಗಿಟ್ಟಿಸಿಕೊಂಡಿದ್ದಾರೆ ಎಂದು ಆರೋಪಿಸಿದರು.

ಕಾರ್ಯಕರ್ತರು 'ಗೋ ಬ್ಯಾಕ್ ಸಿದ್ದೇಶ್ವರ್', 'ಸಿದ್ದೇಶ್ವರ್ ಹಟಾವೋ ದಾವಣಗೆರೆ ಬಚಾವೋ' ಎಂದು ಘೋಷಣೆ ಕೂಗಿ ಆಕ್ರೋಶ ಹೊರ ಹಾಕಿದರು. ಏತನ್ಮಧ್ಯೆ ಓರ್ವ ಕಾರ್ಯಕರ್ತ ಪೆಟ್ರೋಲ್ ಸುರಿದುಕೊಂಡು ಆತ್ಮಹತ್ಯೆಗೂ ಯತ್ನಿಸಿದ ಘಟನೆ ನಡೆಯಿತು.

ಜಿ.ಎಂ. ಸಿದ್ದೇಶ್ವರ ಅವರು ತಮ್ಮ ಕುಟುಂಬದಲ್ಲೇ ಅಧಿಕಾರ ಇರಬೇಕು ಅನ್ನುವ ಉದ್ದೇಶದಿಂದ ಅವರ ಪತ್ನಿಗೆ ಟಿಕೆಟ್ ಕೊಡಿಸಿದ್ದಾರೆ. ಈ ಕುಟುಂಬ ರಾಜಕಾರಣಕ್ಕೆ ಅಂತ್ಯ ಹಾಡಬೇಕು. ಹೀಗಾಗಿ, ಈಗ ಕೊಟ್ಟಿರುವ ಟಿಕೆಟ್ ಹಿಂಪಡೆಯಬೇಕು ಎಂದು ಕಾರ್ಯಕರ್ತರು ಘೋಷಣೆ ಹಾಕಿದರು.

ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಮಾತನಾಡಿ, ನನ್ನನ್ನು ಬಿಟ್ರೆ ದಾವಣಗೆರೆಯಲ್ಲಿ ಶಾಮನೂರು ಮನೆತನದವರ ವಿರುದ್ಧ ಹೋರಾಟ ಮಾಡುವವರು ಯಾರೂ ಇಲ್ಲ ಎಂದು ಸಿದ್ದೇಶ್ವರ ಅವರು ಪಕ್ಷದ ಮುಖಂಡರ ಬಳಿ ಅವರನ್ನು ಅವರೇ ವೈಭವೀಕರಿಸಿಕೊಂಡಿದ್ದಾರೆ ಎಂದು ಆರೋಪಿಸಿದರು.

ಬಿಜೆಪಿಯಲ್ಲಿ ಟಿಕೆಟ್ ರಾಜಕಾರಣಕ್ಕೆ ಅವಕಾಶ ಇಲ್ಲ. ಆದರೆ, ಸಂಸದ ಜಿ.ಎಂ. ಸಿದ್ದೇಶ್ವರ ಅವರ ದುರಹಂಕಾರದಿಂದ ತಮ್ಮ ಪತ್ನಿಗೆ ಟಿಕೆಟ್ ಕೊಡಿಸಿದ್ದಾರೆ. ಆ ಮೂಲಕ ಪಕ್ಷದ ಕಾರ್ಯಕರ್ತರನ್ನು ಕಡೆಗಣಿಸಿದ್ದಾರೆ. ಇದನ್ನೆಲ್ಲ ನೋಡಿದರೆ ಅವರು ಸದ್ದಾಂ ಹುಸೇನ್‌ನಂತಹ ಮನೋಭಾವನೆ ಹೊಂದಿರುವ ವ್ಯಕ್ತಿಯಾಗಿದ್ದಾರೆ. ಜಿಲ್ಲೆಯ ಎಲ್ಲಾ ನಾಯಕರನ್ನು ಕಡೆಗಣಿಸಿ, ತಾನೇ ದೊಡ್ಡ ನಾಯಕ ಎಂಬಂತೆ ಬಿಂಬಿಸಿಕೊಂಡಿದ್ದಾರೆ ಎಂದು ಮಾಜಿ ಸಚಿವ ಎಂ.ಪಿ. ರೇಣುಕಾಚಾರ್ಯ ಕಿಡಿಕಾರಿದರು.



ನರೇಂದ್ರ ಮೋದಿಯವರು ಪ್ರಧಾನಿಯಾಗಬೇಕು. ಅದಕ್ಕಾಗಿ ದಾವಣಗೆರೆ ಕ್ಷೇತ್ರದ ಅಭ್ಯರ್ಥಿಯನ್ನು ಬದಲಿಸಿ ಎಂದು ವರಿಷ್ಠರಲ್ಲಿ ಮನವಿ ಮಾಡುತ್ತೇವೆ ಎಂದು ರೇಣುಕಾಚಾರ್ಯ ಹೇಳಿದರು.

ಸಿದ್ದೇಶ್ವರ ಅವರು ಜಿಲ್ಲೆಗೆ ಯಾವುದೇ ವಿಶೇಷ ಯೋಜನೆಗಳನ್ನು ತಂದಿಲ್ಲ, ಅಭಿವೃದ್ಧಿಯನ್ನೂ ಮಾಡಲ್ಲ. ಪಕ್ಷದ ಸಂಘಟನೆಯಲ್ಲೂ ಅವರ ಪಾತ್ರ ಶೂನ್ಯ. ಬಿಜೆಪಿಯನ್ನು ತಮ್ಮ ಕುಟುಂಬಕ್ಕೆ ಅಥವಾ ಜಿಎಂಐಟಿಗೆ ಸ್ಥಳಾಂತರಿಸ ಹೊರಟಿದ್ದಾರೆ ಎಂದರು.

ಲೋಕಸಭಾ ಆಕಾಂಕ್ಷಿ ಟಿ.ಜಿ. ರವಿಕುಮಾರ್ ಮಾತನಾಡಿ, ಕುಟುಂಬ ರಾಜಕಾರಣ, ಸರ್ವಾಧಿಕಾರಿ ಆಡಳಿತ ಮತ್ತು ಹೊಂದಾಣಿಕೆ ರಾಜಕಾರಣ ಮಾಡಿದ ಸಂಸದ ಜಿ.ಎಂ. ಸಿದ್ದೇಶ್ವರ ಅವರು ಈಗ ಪತ್ನಿಗೆ ಲೋಕಸಭೆಗೆ ಟಿಕೆಟ್ ಕೊಡಿಸಿದ್ದಾರೆ. ಇದನ್ನು ನೋಡಿದರೆ ಪ್ರಜಾಪ್ರಭುತ್ವ ಇಲ್ಲವಾಗಿದೆ ಎಂದರು. ಮೋದಿ ಆವರು ಆಶಯ, ಬಿಜೆಪಿ ಸಿದ್ಧಾಂತದಂತೆ ಕೆಲಸ ಮಾಡುವ ಯಾರಿಗೇ ಟಿಕೆಟ್ ನೀಡಲಿ ಅವರಿಗೆ ತನು, ಮನ, ಧನ ಅರ್ಪಿಸಿ ಅವರ ಪರ ಕೆಲಸ ಮಾಡುತ್ತೇವೆ ಎಂದರು.

ದಾವಣಗೆರೆ ದಕ್ಷಿಣ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಯಾಗಿದ್ದ ಮಾಜಿ ಮೇಯರ್ ಬಿ.ಜೆ. ಅಜಯ್ ಕುಮಾರ್ ಮಾತನಾಡಿ, ಸಿದ್ದೇಶ್ವರ ಅವರು ಜಿಲ್ಲೆಯ ಮುಖಂಡರನ್ನು ವಿಶ್ವಾಸಕ್ಕೆ ತೆಗೆದುಕೊಂಡಿಲ್ಲ. ನಾಯಕರನ್ನೆಲ್ಲ ದೂರವಿಟ್ಟು ತಮ್ಮ ಪತ್ನಿಗೆ ಟಿಕೆಟ್ ಕೊಡಿಸಿದ್ದಾರೆ. ಅದಲ್ಲದೇ ಸರ್ವೆಗಳು ಸಿದ್ದೇಶ್ವರಗೆ ವಿರುದ್ಧ ಇದ್ದವು. ಅದನ್ನೆಲ್ಲಾ ಕಡೆಗಣಿಸಿ ಸಿದ್ದೇಶ್ವರ್ ಕುಟುಂಬ ರಾಜಕಾರಣ ಮಾಡಿದ್ದಾರೆ ಎಂದು ಆರೋಪಿಸಿದರು.

ಲೋಕಿಕರೆ ನಾಗರಾಜ್ ಮಾತನಾಡಿ, ಸಾಕಷ್ಟು ಕಾರ್ಯಕರ್ತರಿದ್ದರೂ ಹೊಸ ಮುಖಕ್ಕೆ ಅವಕಾಶ ಮಾಡಿಕೊಡಬೇಕು ಎಂದು ಕೇಳಿದ್ದೆವು. ಇದು ಇಡೀ ಕ್ಷೇತ್ರದ ಮತದಾರರ, ಕಾರ್ಯಕರ್ತರ, ಮುಖಂಡರ ಭಾವನೆಯೂ ಆಗಿತ್ತು. ಬಿಜೆಪಿಯಲ್ಲಿ ಬಾವುಟ ಹಿಡಿದ ಮಹಿಳೆಯರೂ ಬಹಳಷ್ಟು ಜನರಿದ್ದಾರೆ. ಅವರಿಗಾದರೂ ಟಿಕೆಟ್ ಕೊಡಬಹುದಿತ್ತು ಎಂದು ಮತದಾರರೇ ಹೇಳುತ್ತಾರೆ. ಆದರೆ ಪಕ್ಷದಲ್ಲಿ ತೊಡಗಿಸಿಕೊಳ್ಳದವರಿಗೆ ಟಿಕೆಟ್ ನೀಡಲಾಗಿದೆ.

ಅವರೇ ಅಭ್ಯರ್ಥಿಯಾಗಿ ಮುಂದುವರೆದರೆ, ಮನಸ್ಸಿನಲ್ಲಿ ಮೋದಿಯವರಿಗೆ ಕ್ಷಮೆ ಕೇಳಿ ಮುಂದಿನ ನಿರ್ಧಾರ ತೆಗೆದುಕೊಳ್ಳುತ್ತೇವೆ ಎಂದು ಮತದಾರರು, ಕಾರ್ಯಕರ್ತರು ಹೇಳುತ್ತಿದ್ದಾರೆ. ಆದ್ದರಿಂದ ಇನ್ನೂ ಸಮಯವಿದೆ. ರಾಜ್ಯ ಹಾಗೂ ರಾಷ್ಟ್ರದ ವರಿಷ್ಠರು ಕ್ಷೇತ್ರದ ಅಭ್ಯರ್ಥಿ ಬದಲಿಸಬೇಕು ಎಂದು ಹೇಳಿದರು.

ವಿಧಾನಸಭಾ ಚುನಾವಣಾ ವೇಳೆ ಶಾಸಕರನ್ನು ಗೆಲ್ಲಿಸಿಕೊಂಡು ಹೋಗುವುದು ಸಂಸದರ ಕರ್ತವ್ಯ. ಆದರೆ ಅದನ್ನು ಅವರು ಮನಗಾಣಲಿಲ್ಲ. ಎಂಟೂ ಕ್ಷೇತ್ರಗಳ ಅಭ್ಯರ್ಥಿಗಳು ಚಿಂತನೆ ನಡೆಸಿ, ವರಿಷ್ಠರಿಗೆ ಸಂದೇಶ ರವಾನಿಸುತ್ತೇವೆ ಎಂದು ಮಾಜಿ ಶಾಸಕ ಬಸವರಾಜ ನಾಯ್ಕ ಹೇಳಿದರು.

ರೈತ ಮುಖಂಡ ಶಾಮನೂರು ಲಿಂಗರಾಜ್, ಕೆ.ಎಂ. ಸುರೇಶ್ ಸೇರಿದಂತೆ, ಹಲವರು ಈ ಸಂದರ್ಭದಲ್ಲಿದ್ದರು.

## ಕಲ್ಲನ್ನು ಮಳೆಗಾಲದಲ್ಲಿ ಕಿತ್ತು ಹಾಕಬೇಕು: ಎಸ್ಎಆರ್

**(1ನೇ ಪುಟದಿಂದ)** ಬದಲಿಸಬೇಕು ಎಂಬುದು ನಮ್ಮ ಪ್ರಬಲ ಬೇಡಿಕೆ. ಬದಲಿಸದಿದ್ದರೆ ಹೋರಾಟ ವಂತೂ ನಿಶ್ಚಿತ ಎಂದ ರವಿಂದ್ರನಾಥ್, ಶೀಘ್ರದಲ್ಲಿಯೇ ಪ್ರಧಾನಿ ಮೋದಿ ಆಗಮಿಸಲಿದ್ದಾರೆ. ಆ ಸಮಯಲ್ಲಿ ಅವರ ಗಮನಕ್ಕೆ ತರುತ್ತೇವೆ. ಇನ್ನೂ ಸಮಯವಿದೆ. ನೋಡೋಣ ಎಂದರು.

## ಸುರಿದುಕೊಂಡು ಆತ್ಮಹತ್ಯೆಗೆ ಯತ್ನ



**(1ನೇ ಪುಟದಿಂದ)** ಆತ್ಮಹತ್ಯೆಗೆ ಯತ್ನಿಸಿದ ಘಟನೆ ಗುರುವಾರ ಶಿರಮಗೊಂಡನಹಳ್ಳಿಯಲ್ಲಿರುವ ಮಾಜಿ ಸಚಿವ ಎಸ್.ಎ. ರವೀಂದ್ರನಾಥ್ ಅವರ ನಿವಾಸದ ಆವರಣದಲ್ಲಿ ನಡೆಯಿತು. ತಕ್ಷಣ ಅಲ್ಲಿದ್ದ ಮುಖಂಡರು ಪೆಟ್ರೋಲ್ ಸುರಿದು ಕೊಂಡ ವ್ಯಕ್ತಿ ಮೇಲೆ ನೀರು ಸುರಿದು ರಕ್ಷಿಸಿದರು.

# ಪ್ರಾಣಿಗಳ ಪರಿಶೀಲನೆಗೆ ಆದೇಶ

**(1ನೇ ಪುಟದಿಂದ)** ಒಳಗೆ ವರದಿ ಸಲ್ಲಿಸಬೇಕು ಎಂದು ನ್ಯಾಯಮೂರ್ತಿ ಸುಬ್ರಮಣ್ಯಂ ಪ್ರಸಾದ್ ಆದೇಶಿಸಿದ್ದಾರೆ.

ಮಗುವಿನ ಸಾವಿಗಾಗಿ 50 ಲಕ್ಷ ರೂ. ಪರಿಹಾರ ನೀಡಬೇಕು ಎಂದು ಮಗುವಿನ ತಂದೆ ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಿದ್ದರು.

ಫೆಬ್ರವರಿ 24ರಂದು ಮಗು ತನ್ನ ಮನೆ ಮುಂದೆ ಆಡುತ್ತಿರುವಾಗ ನಾಲ್ಕೈದು ನಾಯಿಗಳು ಕೊಂದು ಹಾಕಿದ್ದವು. ಈ ಪ್ರದೇಶದಲ್ಲಿ ಪೆಟ್‌ಬುಲ್ ಜಾತಿಯ ನಾಯಿಗಳನ್ನು ಸಾಕಲಾಗಿದೆ ಎಂದು ಆರೋಪಿಸಲಾಗಿತ್ತು.

ಜನರ ಜೀವ ರಕ್ಷಣೆಯು ಸರ್ಕಾರದ ಹೊಣೆಯಾಗಿದೆ. ಸ್ಥಳೀಯ ಆಡಳಿತವು ನಾಯಿಗಳಿಗೆ ಸಂಬಂಧಿಸಿದಂತೆ ನಿರ್ಲಕ್ಷ ತೋರುವ ಮೂಲಕ ಸಂವಿಧಾನದ 21ನೇ ವಿಧಿ ಉಲ್ಲಂಘಿಸಿದೆ ಎಂದು ಹೈಕೋರ್ಟ್‌ನಲ್ಲಿ ಅರ್ಜಿ ದಾಖಲಿಸಲಾಗಿತ್ತು.

# ಎಪಿಎಂಸಿಯಲ್ಲಿ ರಾಗಿ ಖರೀದಿ ಕೇಂದ್ರಕ್ಕೆ ಚಾಲನೆ

**(1ನೇ ಪುಟದಿಂದ)** ವೆಂಕಟೇಶ್ ಚಾಲನೆ ನೀಡಿದರು.

ಯಾವುದೇ ಮಧ್ಯವರ್ತಿಗಳಿಲ್ಲದೇ ನೇರವಾಗಿ ರೈತರಿಂದ ರಾಗಿಯನ್ನು ಪ್ರತಿ ಕ್ವಿಂಟಾಲ್‌ಗೆ 3846 ರೂ.ಗಳ ಬೆಂಬಲ ಬೆಲೆಯಲ್ಲಿ ಖರೀದಿ ಮಾಡಲಾಗುತ್ತಿದೆ. ಜಿಲ್ಲೆಯಲ್ಲಿ ಇದುವರೆಗೆ 1126 ರೈತರು ನೋಂದಾಯಿಸಿಕೊಂಡಿದ್ದು 43,868 ಕ್ವಿಂಟಾಲ್ ರಾಗಿ ಖರೀದಿಯಾಗುವ ನಿರೀಕ್ಷೆ ಇದೆ ಎಂದು ಅವರು ತಿಳಿಸಿದರು.

ರಾಗಿ ಬೆಳೆದ ರೈತರು ಯಾವುದೇ ಮಧ್ಯವರ್ತಿಗಳಿಗೆ ರಾಗಿಯನ್ನು ನೀಡದೇ ನೇರವಾಗಿ ಖರೀದಿ ಕೇಂದ್ರಕ್ಕೆ ತರುವ ಮೂಲಕ ಬೆಂಬಲ ಬೆಲೆಯ ಲಾಭ ಪಡೆಯಬೇಕು. ಖರೀದಿ ಕೇಂದ್ರದ ಸಿಬ್ಬಂದಿಗಳು ನಿಯಮಾನುಸಾರ ರೈತರಿಗೆ ತೊಂದರೆಯಾಗದಂತೆ ಕಾರ್ಯನಿರ್ವಹಿಸಲು ಹಾಗೂ ಎ.ಪಿ.ಎಂ.ಸಿ ಯವರು ಅಗತ್ಯ ಮೂಲಭೂತ ಸೌಲಭ್ಯಗಳನ್ನು ನೀಡುವಂತೆ ತಿಳಿಸಿದರು.



ದಾವಣಗೆರೆ, ಹರಿಹರ, ಚನ್ನಗಿರಿ, ಹೊನ್ನಾಳಿ, ಜಗಳೂರು ತಾಲ್ಲೂಕುಗಳಲ್ಲಿ ರಾಗಿ ಖರೀದಿ ಕೇಂದ್ರ ಆರಂಭಿಸಲಾಗಿದ್ದು ಒಟ್ಟು 5 ಕೇಂದ್ರಗಳಲ್ಲಿ ಕರ್ನಾಟಕ ಆಹಾರ ಮತ್ತು ನಾಗರಿಕ ಸರಬರಾಜು ನಿಗಮದ ಮೂಲಕ ಮಾರ್ಚ್ 31ರ ವರೆಗೆ ಖರೀದಿ ಮಾಡಲಾಗುತ್ತಿದೆ. ರೈತರು ಕೇಂದ್ರಕ್ಕೆ ತರುವಾಗ ಎಫ್ಎಕ್ಯೂ ಮಾದರಿ ರಾಗಿ ಗುಣಮಟ್ಟ ಕಾಪಾಡಿಕೊಳ್ಳಬೇಕೆಂದು ತಿಳಿಸಿದರು.

ಆಹಾರ ಮತ್ತು ನಾಗರಿಕ ಸಬರಬರಾಜು ಇಲಾಖೆ ಉಪನಿರ್ದೇಶಕ ಸಿದ್ದರಾಮ್ ಮಾರಿಹಾಳ್, ತಹಶೀಲ್ದಾರ್ ಡಾ. ಎಂ.ಬಿ ಅಶ್ವತ್ಥ್ ಮತ್ತು ನಿಗಮದ ಅಧಿಕಾರಿಗಳು ಉಪಸ್ಥಿತರಿದ್ದರು.


**TUITIONS**
IGCSE, ICSE, CBSE and State Board from class 5th to 12th MCC A Block
98444 92888

**COSDERM HAIR & SKIN CARE WELLNESS CENTRE DAVANAGERE**
ವಿಶೇಷ ಕೊಡುಗೆ : ಶೇ. 50 ರಷ್ಟು ರಿಯಾಯ್ತಿ
ತೂಕ ಇಳಿಕೆ ಮತ್ತು ತೂಕ ಏರಿಕೆ
ಕೂದಲು ಮತ್ತು ಚರ್ಮದ ಸಮಸ್ಯೆಗಳಿಗೆ ಶಾಶ್ವತ ಪರಿಹಾರ
76192-57443, 63603 34132
08192 468705

**NEED HOUSE FOR LEASE**
1 or 2 BHK house for lease Near M.C.C 'B' Block, A Block.
Call 95356 56163

**ಜಮೀನು ಮಾರಾಟಕ್ಕಿದೆ**
ಲೋಕಿಕೆರೆ ರಸ್ತೆಗೆ $1^1/_2$ ಎಕರೆ
ರೂ. 95 ಲಕ್ಷ
ಕೊಂಡಜ್ಜಿ ಹತ್ತಿರ 12 ಎಕರೆ
ರೂ. 27 ಲಕ್ಷ ಎಕರೆಗೆ
(Contact only buyers)
Sharma: 63608 66997

**ಬೇಕಾಗಿದ್ದಾರೆ**
ಟಾಟಾ ಏಸ್ ಓಡಿಸಬಲ್ಲ ಬ್ಯಾಡ್ಜ್‌ವುಳ್ಳ ಡ್ರೈವರ್ -1 ಹಾಗೂ ಅಪೇ ಆಟೋ ಓಡಿಸಬಲ್ಲ ಲೈಸನ್ಸ್‌ವುಳ್ಳ ಡ್ರೈವರ್ - 1 ಬೇಕಾಗಿದ್ದಾರೆ. ಅನುಭವವುಳ್ಳವರು ಸಂಪರ್ಕಿಸಿ :
ಮಣಿಕಂಠ ಏಜೆನ್ಸೀಸ್
ಜಯದೇವ ಪ್ರೆಸ್ ಹಿಂಭಾಗ, ಚೌಕಿಪೇಟೆ, ದಾವಣಗೆರೆ.
9448233326,7899135660

**ಸೈಟು & ಮನೆ ಮಾರಾಟಕ್ಕಿವೆ**
1) ಡಾಲರ್ಸ್ ಕಾಲೋನಿ ಮನೆ (30x50) ಪಶ್ಚಿಮ
2) ಡಾಲರ್ಸ್ ಕಾಲೋನಿ ಸೈಟ್ (40x51) ಪಶ್ಚಿಮ
3) ಹಳೇ ಕುಂದವಾಡ ಸೈಟ್ (30x50) ಪಶ್ಚಿಮ
ಸಂಪರ್ಕಿಸಿ:
91481 25125

**ಬೇಕಾಗಿದ್ದಾರೆ**
ನ್ಯೂರೋಥೆರಪಿ ಕ್ಲಿನಿಕ್‌ನಲ್ಲಿ ಪಿಯುಸಿ ಪಾಸಾದವರು ಸಹಾಯಕರಾಗಿ ಬೇಕಾಗಿದ್ದಾರೆ. ದಾವಣಗೆರೆ ಮತ್ತು ಬೆಂಗಳೂರಿನಲ್ಲಿ ಕೆಲಸ ಮಾಡಲು ಅವಕಾಶ
ಆಕರ್ಷಕ ಸಂಬಳ, ತಕ್ಷಣ ಸಂಪರ್ಕಿಸಿ :
99726 00713

**ಬೇಕಾಗಿದ್ದಾರೆ**
ಫರ್ನೀಚರ್ ಫ್ಯಾಕ್ಟರಿಯಲ್ಲಿ ಕೆಲಸ ಮಾಡಲು ಪುರುಷ ಅಭ್ಯರ್ಥಿಗಳು ಬೇಕಾಗಿದ್ದಾರೆ. ವಯೋಮಿತಿ 21 ರಿಂದ 30 ವರ್ಷ, ಸ್ಥಳ : ದಾವಣಗೆರೆ.
86182 60719

**WELL FURNISHED HOUSE TO LET / Lease Domestic / Commercial**
3 BHK, Big Hall, Veranda, Pooja, Kitchen, Store, Bath in 1st Floor, 13th main, BIET Road, 1646 / 31, Opp Dvg-Harihar Urban Bank Ltd. And 13 feet with 26 feet lenth Hall to Let, 7th cross, Kuvempu Nagara,1st Building
98444 99799

**ಬೇಕಾಗಿದ್ದಾರೆ**
ಟೆಲಿಕಾಲಿಂಗ್ ಎಕ್ಸಿಕ್ಯೂಟಿವ್ & ಮಾರ್ಕೆಟಿಂಗ್ ಎಕ್ಸಿಕ್ಯೂಟಿವ್ / ಮ್ಯಾನೇಜರ್, ಡೆಲಿವರಿ ಬಾಯ್ & ಡ್ರೈವರ್ SJV MART ಗೆ ಬೇಕಾಗಿದ್ದಾರೆ. ಸಂಪರ್ಕಿಸಿ :
89045 80039 / 36
73493 91298

**ಬೇಕಾಗಿದ್ದಾರೆ**
ACE TRACTOR SHOWROOM ಗಾಗಿ
ಸೇಲ್ಸ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ಆಕರ್ಷಕ ಸಂಭಾವನೆ ಮತ್ತು ಪ್ರತ್ಯೇಕ ಇನ್ಸೆಂಟಿವ್ ನೀಡಲಾಗುವುದು. ಅನುಭವವುಳ್ಳವರಿಗೆ ಪ್ರಥಮ ಆದ್ಯತೆ.
9916955111, 9448202030

**ಬೇಕಾಗಿದ್ದಾರೆ**
ವಿದ್ಯಾನಗರದ ಹೆಸರಾಂತ ಬ್ಯೂಟಿ ಪಾರ್ಲರ್ ಗೆ ಅನುಭವವುಳ್ಳ ಮಹಿಳಾ ಬ್ಯೂಟಿಷಿಯನ್ ಗಳು ಬೇಕಾಗಿದ್ದಾರೆ. ಸಂಪರ್ಕಿಸಿ
ಶೃತಿ ಕೃಷ್ಣ
97407 82999

**SUMMER CAMP**
Computer training classes for 8 -15 years kids Anjaneya Badavane Davangere. Call:
88844 54355

**OFFICE FURNITURE FOR SALE**
Computer desks, 3 Cassette AC Glass Partions, Cupboard etc for sale near Janatha Bazar Road, Davanagere. Contact :
97391 02088

**ಸೇಲ್ಸ್‌ಮೆನ್ ಬೇಕಾಗಿದ್ದಾರೆ**
ರೆಡಿಮೇಡ್ ಬಟ್ಟೆ ಅಂಗಡಿಗೆ
2nd Skin
ಚೇತನ ಹೋಟೆಲ್ ರಸ್ತೆ
ಪಿಜೆ ಬಡಾವಣೆ, ದಾವಣಗೆರೆ.
88616 89590

**ಅಕೌಂಟೆಂಟ್ ಬೇಕಾಗಿದ್ದಾರೆ**
ಸುಪ್ರೀತ್ ಮೋಟಾರ್ಸ್, ಬಾಷ್ ಕಾರ್ ಸರ್ವೀಸ್, ಶಿರಮಗೊಂಡನಹಳ್ಳಿ ಹತ್ತಿರ, ಚನ್ನಗಿರಿ ರೋಡ್, ದಾವಣಗೆರೆ.
Any degree, Basic Computer Knowledge, Tally, Excel
ಅನುಭವ ಇರುವವರಿಗೆ ಆಧ್ಯತೆ, ಕೆಲಸದ ಸಮಯ : 9.30 ರಿಂದ ಸಂಜೆ: 6.30
80738 47422, 96115 36299

**ಮದ್ಯವ್ಯಸನಿಗೆ ಅರಿವಿಲ್ಲದಂತೆ ಮದ್ಯ ಸೇವನೆ ಬಿಡಿಸಿರಿ**
ಪ್ರತಿ ತಿಂಗಳು 7ಮತ್ತು 21ನೇ ತಾರೀಖು ಜನತಾ ಡೀಲಕ್ಸ್ ಲಾಡ್ಜ್, KSRTC ಹೊಸ ಬಸ್ ಸ್ಟ್ಯಾಂಡ್ ಎದುರು, ದಾವಣಗೆರೆ.
4 ಮತ್ತು 18 ರಂದು ಕಾವೇರಿ ಲಾಡ್ಜ್, ಪೂನಾ - ಬೆಂಗಳೂರು ರೋಡ್, ಹಾವೇರಿ.
ಅಸ್ತಮಾ, ಕೀಲು ನೋವು
ಡಾ|| ಎಸ್.ಎಂ. ಸೇಠಿ. ಫೋ. : 96322 95561
ಸಮಯ: ಬೆಳಿಗ್ಗೆ 10 ರಿಂದ ಮಧ್ಯಾಹ್ನ 2 ರವರೆಗೆ

ಶ್ರೀ ಗುರು ಮರುಳಸಿದ್ದೇಶ್ವರ ಸ್ವಾಮಿ ಸೇವಾ ಸಂಸ್ಥೆ (ರಿ.)
**ಹಿಂದೂ ವಧು-ವರರ ಮಾಹಿತಿ ಕೇಂದ್ರ**
www.hindusmatrimony.com
ನಮ್ಮಲ್ಲಿ ಎಲ್ಲಾ ತರಹದ ಹಿಂದೂ ವಧು-ವರರಿಗಾಗಿ ಸಂಪರ್ಕಿಸಿ.
ವಿಳಾಸ : ಬಾಣಾಪುರಮಠ ಹಾಸ್ಪಿಟಲ್ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ-2.
94481-59303, 94834 63783

**ಸೈಟು ಬೇಕಿದೆ (ನೆಲಮಂಗಲದಲ್ಲಿ)**
ನೆಲಮಂಗಲ ಸೊಂಡೆಕೊಪ್ಪ ರೋಡ್, ತರಳಬಾಳು ನಗರದಲ್ಲಿ
ಕಿರಣ್ ಬೂಸ್ನೂರ್ : 98440-63409
ಬೆಂಗಳೂರು ಮತ್ತು ಮೈಸೂರಿನಲ್ಲೂ ಸಹ ಬೇಕಾಗಿದೆ

**ಬೇಕಾಗಿದ್ದಾರೆ**
ಪ್ರತಿಷ್ಠಿತ ಪೇಂಟ್ಸ್ ಕಂಪನಿಗೆ ದಾವಣಗೆರೆ ವಲಯಕ್ಕೆ ಸೇಲ್ಸ್ ಎಕ್ಸಿಕ್ಯೂಟಿವ್ ಬೇಕಾಗಿದ್ದಾರೆ. ನಿಮ್ಮ CV ಅನ್ನು vp@hebsurgroup.in ಗೆ ಇ-ಮೇಲ್ ಮಾಡಿ, ಅಥವಾ
82960 51665 ಗೆ
Whatsapp ಮಾಡಿ.


# ಸಿಎಎದಲ್ಲಿ ತಮಿಳರನ್ನು ಹೊರಗಿಟ್ಟ ಶ್ರೀಲಂಕಾ!

ಬೆಂಗಳೂರು, ಮಾ. 14 - ಶ್ರೀಲಂಕಾ ತಮಿಳರನ್ನು ಹೊರಗಿಟ್ಟು, ಪೌರತ್ವ ತಿದ್ದುಪಡಿ ಕಾಯಿದೆ (ಸಿ.ಎ.ಎ.) ಜಾರಿಗೆ ರಾಜ್ಯ ಸರ್ಕಾರ ವಿರೋಧ ವ್ಯಕ್ತಪಡಿಸಿದೆ.

ಸಚಿವ ಸಂಪುಟ ಸಭೆ ನಂತರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಂದಾಯ ಸಚಿವ ಕೃಷ್ಣ ಭೈರೇಗೌಡ, ಸಿ.ಎ.ಎ. ಹಾಗೂ ಜಾತಿ ಗಣತಿ ಬಗ್ಗೆ ಇಂದಿನ ಸಭೆಯಲ್ಲಿ ಯಾವುದೇ ಚರ್ಚೆ ಆಗಿಲ್ಲ. ಆದರೆ ನಮ್ಮ ಅಭಿಪ್ರಾಯ ಶ್ರೀಲಂಕಾ ತಮಿಳರನ್ನು ಹೊರಗಿಟ್ಟಿರುವುದು ಏಕೆ? ಎಂದು ಪ್ರಶ್ನಿಸಿದರು.

ಎಲ್‌ಟಿಟಿಇಯನ್ನು ನೀವು ಏನು ಬೇಕಾದರೂ ಮಾಡಿ, ತಪ್ಪು ಮಾಡಿದ್ದರೆ ಒದ್ದು ಒಳಗೆ ಹಾಕಿ. ಆದರೆ, ಕರ್ನಾಟಕ, ತಮಿಳುನಾಡಿನಲ್ಲಿ ಶ್ರೀಲಂಕಾ ತಮಿಳರಿದ್ದು, ಅವರಿಗೆ ಏಕೆ ರಕ್ಷಣೆ ಕೊಡುತ್ತಿಲ್ಲ? ಎಂದರು.

ಶ್ರೀಲಂಕಾ ಬಿಟ್ಟು ಅವರು ಭಾರತಕ್ಕೆ ಬಂದಿದ್ದಾರೆ. ಅವರಿಗೆ ರಕ್ಷಣೆ ಕೊಡಬೇಕಾದುದು ನಮ್ಮ ಕರ್ತವ್ಯ. ಎಲ್‌ಟಿಟಿಇ ಮತ್ತು ಶ್ರೀಲಂಕಾ ನಡುವಿನ ಘರ್ಷಣೆಯಿಂದ ಅನೇಕರು ಬಲಿಯಾಗಿದ್ದಾರೆ. ಜಾಗ ಕಳೆದುಕೊಂಡು ಭಾರತಕ್ಕೆ ಬಂದಿದ್ದಾರೆ. ಅವರನ್ನು ಏಕೆ ಸಿಎಎ ಅಡಿ ತಂದಿಲ್ಲ? ಎಂದು ಕೇಂದ್ರವನ್ನು ಪ್ರಶ್ನಿಸಿದರು.

ಕರ್ನಾಟಕ ಏಕೀಕರಣವಾಗಿ 50 ವರ್ಷ ತುಂಬಿರುವ ಹಿನ್ನೆಲೆಯಲ್ಲಿ ಭುವನೇಶ್ವರಿ ತಾಯಿ ಪುತ್ಥಳಿಯನ್ನು ವಿಧಾನಸೌಧದ ಆವರಣದಲ್ಲಿ ಸ್ಥಾಪಿಸಲು ತೀರ್ಮಾನ ಕೈಗೊಳ್ಳಲಾಗಿದೆ ಎಂದು ಕೃಷ್ಣ ಭೈರೇಗೌಡ ಇದೇ ಸಂದರ್ಭದಲ್ಲಿ ಹೇಳಿದರು.

ಭಾಷೆ, ಸಂಸ್ಕೃತಿ, ಇತಿಹಾಸದ ಭಾವನೆಗಳ ಪ್ರತೀಕ ಈ ಪುತ್ಥಳಿಯಾಗಿರುತ್ತದೆ. ಇದಕ್ಕಾಗಿ 23 ಕೋಟಿ ರೂ. ವೆಚ್ಚದಲ್ಲಿ ಪ್ರತಿಮೆ ನಿರ್ಮಾಣ ಮಾಡಲು ತೀರ್ಮಾನ ಕೈಗೊಳ್ಳಲಾಗಿದೆ ಎಂದು ಹೇಳಿದರು.

ಕೃಷಿ ಉತ್ಪನ್ನಗಳ ಹೆಚ್ಚಳ ಹಾಗೂ ರೈತರಿಗೆ ಲಾಭ ತರುವ ಉದ್ದೇಶದಿಂದ 67 ಕೋಟಿ ರೂ. ವೆಚ್ಚದಲ್ಲಿ ಅಗ್ರಿ ಇನ್ನೋವೇಶನ್ ಕೇಂದ್ರ ಸ್ಥಾಪನೆಗೆ ಸಭೆ ಒಪ್ಪಿಗೆ ನೀಡಿದೆ ಎಂದು ಇದೇ ಸಂದರ್ಭದಲ್ಲಿ ತಿಳಿಸಿದರು.

ಮಾಹಿತಿ ತಂತ್ರಜ್ಞಾನ ಕ್ಷೇತ್ರದ ಮಾದರಿಯಲ್ಲೇ ಕೃಷಿ ಉದ್ದಿಮೆಯಲ್ಲೂ ಅತ್ಯಾಧುನಿಕ ಯಂತ್ರಗಳನ್ನು ಬಳಸಲು ಉತ್ತೇಜಿಸುವ ಉದ್ದೇಶ ಇದಾಗಿದೆ.

ಈ ಯಂತ್ರಗಳ ತಯಾರಿಕೆಗೆ ನವೋದ್ಯಮ ಸ್ಥಾಪಿಸಲಾಗುವುದು, ಅದರ ಮೂಲಕ ಹೊಸ ಹೊಸ ಪರಿಕರಗಳನ್ನು ತಯಾರಿಸಿ, ಕಡಿಮೆ ದರದಲ್ಲಿ ರೈತರಿಗೆ ನೀಡುವುದರಿಂದ ಕೃಷಿ ಉತ್ಪಾದನೆಗೆ ಸಹಕಾರಿಯಾಗಲಿದೆ ಎಂದು ತಿಳಿಸಿದರು.

ಪಿಎಸ್ಐ ನೇಮಕಾತಿ ಹಗರಣವನ್ನು ಎಸ್ಐಟಿ ತನಿಖೆಗೆ ವಹಿಸಲು ಸಂಪುಟ ಸಮ್ಮತಿಸಿದೆ. ನ್ಯಾಯಮೂರ್ತಿ ಬಿ.ವೀರಪ್ಪ ನೇತೃತ್ವದ ಸಮಿತಿ ನೀಡಿರುವ ಶಿಫಾರಸ್ಸಿನಂತೆ, ಹಿಂದಿನ ತನಿಖೆಯಲ್ಲಿ ಕೆಲವು ತಪ್ಪುಗಳಾಗಿದ್ದು, ಕೆಲವರಿಗೆ ಸಮನ್ಸ್ ನೀಡಿದರೂ ಹಾಜರಾಗಿಲ್ಲ, ಈ ಎಲ್ಲಾ ವಿಷಯ ಸೇರಿದಂತೆ ತನಿಖೆ ನಡೆಸುವಂತೆ ಶಿಫಾರಸ್ಸು ನೀಡಿರುವ ಹಿನ್ನೆಲೆಯಲ್ಲಿ ಎಸ್ಐಟಿ ತನಿಖೆಗೆ ನೀಡುವ ತೀರ್ಮಾನಕ್ಕೆ ಬರಲಾಗಿದೆ ಎಂದರು.


**NEET/KCET CRASH COURSE**
FROM-19.03.2024
ಸಮೃದ್ಧಿ ಅಕಾಡೆಮಿ ದಾವಣಗೆರೆ.
96202 62361
81472 62361

**SKIN, HAIR & BODY CARE**

* Ayurvedic massage
* Weightloss massage
* Pain relief massages
* Herbal powder massage
FULL BODY RELAXATION
NOW AT DAVANGERE
87923 31569


## ಕಮ್ಮತ್ತಹಳ್ಳಿ ಸಿ. ಪುಷ್ಪಾವತಿ ನಿಧನ



ಹರಪನಹಳ್ಳಿ ತಾಲ್ಲೂಕು ಕಮ್ಮತ್ತಹಳ್ಳಿ ಗ್ರಾಮದ ವಾಸಿ ದಿ. ಎಂ. ಚನ್ನಪ್ಪನವರ ಧರ್ಮಪತ್ನಿ

**ಸಿ. ಪುಷ್ಪಾವತಿ**

ಇವರು, ದಿನಾಂಕ 14.03.2024ರ ಗುರುವಾರ ರಾತ್ರಿ 8.30 ಗಂಟೆಗೆ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಮೃತರಿಗೆ 66 ವರ್ಷ ವಯಸ್ಸಾಗಿತ್ತು. ಓರ್ವ ಪುತ್ರ, ಇಬ್ಬರು ಪುತ್ರಿಯರು, ಸೊಸೆ, ಅಳಿಯಂದಿರು, ಮೊಮ್ಮಕ್ಕಳು ಹಾಗೂ ಅಪಾರ ಬಂಧು-ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯನ್ನು ದಿನಾಂಕ 15.03.2024ರ ಶುಕ್ರವಾರ ಮಧ್ಯಾಹ್ನ 12 ಗಂಟೆಗೆ ಮೃತರ ಸ್ವಗ್ರಾಮವಾದ ಹರಪನಹಳ್ಳಿ ತಾಲ್ಲೂಕು ಕಮ್ಮತ್ತಹಳ್ಳಿ ಗ್ರಾಮದ ಮೃತರ ಜಮೀನಿನಲ್ಲಿ ನೆರವೇರಿಸಲಾಗುವುದು.

**ದುಃಖತಪ್ತ ಕುಟುಂಬ ವರ್ಗ, ಮೊ : 99162 60576**

## ಸವಿನೆನಪು




**ದಿ|| ಶ್ರೀ ನೇರ್ಲಿಗೆ ಯಲ್ಲಪ್ಪನವರು,** ಸಂಸ್ಥಾಪಕರು
**ಶ್ರೀ ರಂಗನಾಥ ಸ್ವಾಮಿ ವಿದ್ಯಾಭಿವೃದ್ಧಿ ಸಮಿತಿ (ರಿ.) ನೇರ್ಲಿಗೆ.**

ನೀವು ನಮ್ಮನ್ನಗಲಿ ಇಂದಿಗೆ ಹದಿನೈದು ವರ್ಷಗಳು ಕಳೆದರೂ ನಮ್ಮ ಹೃದಯಗಳಲ್ಲಿ ಶಾಶ್ವತವಾಗಿ ನೆಲೆಸಿದ್ದೀರಿ. ನಿಮ್ಮ ನೆನಪು ಸದಾ ನಮ್ಮ ಮನಗಳಲ್ಲಿ ಹಚ್ಚ ಹಸಿರಾಗಿದೆ. ನೀವು ಹಾಕಿಕೊಟ್ಟ ಪಥದಲ್ಲಿ ಸಾಗುತ್ತಿರುವ,

**ಮುಖ್ಯೋಪಾಧ್ಯಾಯರು ಮತ್ತು ಸಿಬ್ಬಂದಿ ವರ್ಗದವರು**
**ಶ್ರೀ ಸಿದ್ದೇಶ್ವರ ವಸತಿ ಪ್ರೌಢಶಾಲೆ, ಕಂಚಿಕೆರೆ,** ಹರಪನಹಳ್ಳಿ ತಾ||

## ಹದಿನಾರನೇ ವರ್ಷದ ಪುಣ್ಯಸ್ಮರಣೆ



**ನೇತ್ರದಾನಿ ಚಿ|| ಕೆ.ಆರ್.ಗಿರೀಶ್ ಹುಲಗಿ**
ಜನನ : 24.12.1976, ಮರಣ : 12.03.2008

*ಹಿರಿಯರೆನ್ನದೇ, ಕಿರಿಯರೆನ್ನದೇ, ಬಡವರೆನ್ನದೇ, ಧನಿಕರೆನ್ನದೇ, ಎಲ್ಲರ ಸ್ನೇಹದಿ ನಗು-ನಗುತ ನಮ್ಮೆಲ್ಲರ ಮನಕೆ ಹತ್ತಿರವಾಗಿ, ನಿನ್ನ ಬದುಕಿನ ಆರಂಭದ ಪುಟಗಳನ್ನು ಬರೆಯುತ್ತಿದ್ದಂತೆ, ಕೊನೆಯ ಪುಟಗಳ ಬರೆದು ನನಗೆ ನೀನು ಪ್ರಿಯನೆಂದು ಶಿವನು ಕರೆದೊಯ್ದು ಇಂದಿಗೆ ಹದಿನಾರು ವರ್ಷಗಳಾದವು. ನಿನ್ನ ಬದುಕು ಇಲ್ಲವಾದರೂ ನಿನ್ನ ನೆನಪು ಅಮರ. ಮನೆಯವರಿಗೆಲ್ಲರಿಗೂ ಬೆಳಕಾಗಿ, ಅಂಧರಿಗೆ ದೃಷ್ಟಿಕೊಟ್ಟು, ಮಿಂಚಿ ಮರೆಯಾದ*

**ಚಿ|| ಕೆ.ಆರ್. ಗಿರೀಶ್**

ಸದಾ ನಿನ್ನ ನೆನಪಿನಂಗಳದಲ್ಲಿ ನಲುಗುತ್ತಿರುವ,

**ಅಣ್ಣ - ಮಗನಾದ ಸೃಜನ್, ಸುಮನ್, ಸುರಭಿ ಮತ್ತು ಪಾವನಿ ಸಹೋದರಿಯರು ಮತ್ತು ಭಾವಂದಿರು, ಮಾಮನಾದ ಕೆ.ಜಿ.ಶಿವಕುಮಾರ್ ಮತ್ತು ಕುಟುಂಬ ವರ್ಗ ಸ್ನೇಹಿತರು, ಗಂಡಗಾಳೆ ಬಂಧುಗಳು ಹಾಗೂ ಮಿತ್ರರು.**

ಹುಲಗಿ ಸ್ಟುಡಿಯೋ ಮತ್ತು ಹುಲಗಿ ಎಂಟರ್‌ಪ್ರೈಸಸ್, ನಿಜಲಿಂಗಪ್ಪ ಬಡಾವಣೆ, ದಾವಣಗೆರೆ.


## ನೀಲಾನಹಳ್ಳಿಯಲ್ಲಿ ಇಂದು ತೇರು



ದಾವಣಗೆರೆ ತಾಲ್ಲೂಕಿನ ನೀಲಾನಹಳ್ಳಿಯ ಶ್ರೀ ಆಂಜನೇಯ ಸ್ವಾಮಿ ರಥೋತ್ಸವ ಹಾಗೂ ಕಾರಣಿಕವು ಇಂದು ನಡೆಯಲಿದೆ ಎಂದು ದೇವಸ್ಥಾನದ ಕನ್ವೀನರ್ ಎನ್.ಎಂ. ಆಂಜನೇಯ ಗುರೂಜಿ ತಿಳಿಸಿದ್ದಾರೆ. ಕಾರ್ಯಕ್ರಮದ ಅಂಗವಾಗಿ ಇಂದು ಬೆಳಿಗ್ಗೆ 8.30ಕ್ಕೆ ರಥೋತ್ಸವ ನಡೆಯಲಿದೆ. ಬೆಳಿಗ್ಗೆ 9.30 ರಿಂದ 1.30ರವರೆಗೆ ಭಕ್ತಾದಿಗಳು ಹರಕೆ ತೀರಿಸುವ ಕಾರ್ಯಕ್ರಮ ನಡೆಯಲಿದೆ. ಸಂಜೆ 4.30ಕ್ಕೆ ಬೇಟೆ ಆಡುವುದು, ನಂತರ 5.30ಕ್ಕೆ ಮುಳ್ಳುಗದ್ದುಗೆ ಏರುವುದು, 6.30ಕ್ಕೆ ಕಾರಣಿಕ ಮತ್ತು 7.30ಕ್ಕೆ ಭೂತ ಸೇವೆ, ನಂತರ 8.30ಕ್ಕೆ ಓಕಳಿ ಕಾರ್ಯ, 9.30ಕ್ಕೆ ಗಂಗಾ ಪೂಜೆಯೊಂದಿಗೆ ರಥೋತ್ಸವ ಪೂರ್ಣಗೊಳ್ಳಲಿದೆ.

## ವಡೆಯರ ಬಸಾಪುರದಲ್ಲಿ ನಾಳೆ ತೇರು

ಮಲೇಬೆನ್ನೂರು, ಮಾ. 14 - ವಡೆಯರ ಬಸಾಪುರ ಗ್ರಾಮದ ಶ್ರೀ ಬಸವೇಶ್ವರ ದೇವರ ರಥೋತ್ಸವವು ನಾಳೆ ದಿನಾಂಕ 16ರ ಶನಿವಾರ ಬೆಳಿಗ್ಗೆ 9 ಕ್ಕೆ ಜರುಗಲಿದೆ.


**ಲೈಂಗಿಕ ನಿಶ್ಯಕ್ತಿಗೆ ನಿರಾಶರಾಗಬೇಡಿ**

ಶೀಘ್ರ ಸ್ಖಲನ, ಹಸ್ತ ಮೈಥುನ, ಸ್ವಪ್ನದೋಷ, ನರಗಳ ದೌರ್ಬಲ್ಯತೆ, ತಾರುಣ್ಯ ನಾಶ, ಸಂತಾನ ದೋಷ, ಲೈಂಗಿಕ ಸಮಸ್ಯೆಗೆ ಭೇಟಿಯಾಗಿ.
ದಾವಣಗೆರೆ : 2&3ರಂದು ಬಸವರಾಜ ಲಾಡ್ಜ್ ಪಿ.ಬಿ. ರಸ್ತೆ.
ಡಾ|| ಎಚ್.ಆಯ್. ದೊಡ್ಡಮನಿ (G.R.No.8969)
ದಮ್ಮಣಿಗಿ ಕಾಂಪ್ಲೆಕ್ಸ್, 1ನೇ ಮಹಡಿ, ನಂ.26 ಹಳೇಬಸ್ ಸ್ಟ್ಯಾಂಡ್ ಎದುರಿಗೆ, ಹುಬ್ಬಳ್ಳಿ
M:9740523710


## ರಾಣೇಬೆನ್ನೂರಿಗೆ ಇಂದು ಬೊಮ್ಮಾಯಿ

ಇಂದು ಬೆಳಿಗ್ಗೆ 11 ಕ್ಕೆ ಆಗಮಿಸುವ ಗದಗ-ಹಾವೇರಿ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಬಸವರಾಜ ಬೊಮ್ಮಾಯಿ ಅವರನ್ನು ಮಾಗೋಡ ಕ್ರಾಸ್ ಬಳಿ ಸ್ವಾಗತಿಸಲಾಗುವುದು. ನಂತರ ನಡೆಯುವ ಬಿಜೆಪಿ ಸಭೆಯಲ್ಲಿ ಭಾಗವಹಿಸುವರು ಎಂದು ಅಧ್ಯಕ್ಷ ಪರಮೇಶ ಗೂಳಣ್ಣನವರ ತಿಳಿಸಿದ್ದಾರೆ.

KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas

# ಲೋಕಸಭಾ ಚುನಾವಣಾ ಹೊಸ್ತಿಲಲ್ಲಿ ಕುಮಾರಸ್ವಾಮಿಗೆ ಹೃದಯ ಶಸ್ತ್ರಚಿಕಿತ್ಸೆ



ಬೆಂಗಳೂರು, ಮಾ. 14 - ಲೋಕಸಭಾ ಚುನಾವಣಾ ಹೊಸ್ತಿಲಲ್ಲೇ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಮತ್ತೊಮ್ಮೆ ಹೃದಯ ಶಸ್ತ್ರ ಚಿಕಿತ್ಸೆಗೆ ಒಳಗಾಗಲಿದ್ದಾರೆ.

ಇದರ ಮಧ್ಯೆ ಲೋಕಸಭಾ ಚುನಾವಣಾ ತಯಾರಿ ಹಾಗೂ ಉಳಿದ ಕ್ಷೇತ್ರಗಳ ಅಭ್ಯರ್ಥಿಗಳ ಆಯ್ಕೆಗೆ ಸಂಬಂಧಿಸಿದಂತೆ ಕುಮಾರಸ್ವಾಮಿ ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುವ ಉದ್ದೇಶದಿಂದ ದೆಹಲಿಗೆ ಬರುವಂತೆ ಬಿಜೆಪಿ ವರಿಷ್ಠರು ಆಹ್ವಾನಿಸಿದ್ದಾರೆ.

ಬಹುತೇಕ ನಾಳೆ ದೆಹಲಿಗೆ ತೆರಳಲಿರುವ ಕುಮಾರಸ್ವಾಮಿ, ಪ್ರಧಾನಿ ಮೋದಿ, ಕೇಂದ್ರ ಗೃಹ ಸಚಿವ ಷಾ ಅವರನ್ನು ಭೇಟಿ ಮಾಡಿ ಚರ್ಚೆ ಮಾಡಲಿದ್ದಾರೆ.

ಹೃದಯ ಶಸ್ತ್ರ ಚಿಕಿತ್ಸೆಗೆ ಒಳಗಾಗುವ ಕುಮಾರ ಸ್ವಾಮಿ ಅವರಿಗೆ ವಿಶ್ರಾಂತಿ ಅಗತ್ಯವಿರುವುದರಿಂದ ಅವರು ಲೋಕಸಭಾ ಚುನಾವಣಾ ಕಣಕ್ಕಿಳಿಯುವುದು ಕ್ಲಿಷ್ಟಕರ. ಆದರೆ, ನಾಳೆ ದೆಹಲಿಯಲ್ಲಿ ಪ್ರಧಾನಿ ಅವರು ಚುನಾವಣಾ ಕಣಕ್ಕಿಳಿಯುವಂತೆ ಸಲಹೆ ಮಾಡಿದರೆ ಮಂಡ್ಯದಲ್ಲಿ ಸ್ಪರ್ಧಿಸಲಿದ್ದಾರೆ.

ವಿಧಾನಮಂಡಲದ ಅಧಿವೇಶನ ನಡೆಯುವ ಸಂದರ್ಭದಲ್ಲೇ ಕುಮಾರಸ್ವಾಮಿ ಅವರಿಗೆ ಆರೋಗ್ಯದಲ್ಲಿ ಏರುಪೇರು ಕಂಡ ತಕ್ಷಣ ಡಾ. ಮಂಜುನಾಥ್ ಚೆನ್ನೈನ ಅಪೊಲೋ ಆಸ್ಪತ್ರೆಯ ಪರಿಣಿತ ವೈದ್ಯರ ಬಳಿ ಕಳುಹಿಸಿದ್ದರು.

ಅಲ್ಲಿ ಮೂರು ದಿನಗಳ ಕಾಲ ಚಿಕಿತ್ಸೆ ಪಡೆದ ನಂತರ ಮತ್ತೊಂದು ಶಸ್ತ್ರ ಚಿಕಿತ್ಸೆ ಅಗತ್ಯವಿದ್ದು ಇದನ್ನು ನಮ್ಮಿಂದ ಮಾಡಲು ಸಾಧ್ಯವಿಲ್ಲ ಎಂದು ಅಮೆರಿಕ ವೈದ್ಯರನ್ನು ಅವರೇ ಸಂಪರ್ಕಿಸಿ, ಕುಮಾರಸ್ವಾಮಿ ಅವರ ಶಸ್ತ್ರ ಚಿಕಿತ್ಸೆಗೆ ಸಮಯ ನಿಗದಿ ಮಾಡಿದ್ದರು. ಮಾರ್ಚ್ 21 ರಂದು ಚೆನ್ನೈನ ಅಪೊಲೋದಲ್ಲೇ ಮೂರನೇ ಬಾರಿಗೆ ಹೃದಯ ಶಸ್ತ್ರ ಚಿಕಿತ್ಸೆಗೆ ಒಳಗಾಗಲಿದ್ದಾರೆ.

ಕುಮಾರಸ್ವಾಮಿ ಅವರಿಗೆ ಶಸ್ತ್ರ ಚಿಕಿತ್ಸೆ ಮಾಡಲು ಅಮೆರಿಕದಿಂದ ಪರಿಣಿತರ ವೈದ್ಯರ ತಂಡವೇ ಮಾರ್ಚ್ 19ಕ್ಕೆ ಚೆನ್ನೈಗೆ ಬರಲಿದೆ. ಅಂದೇ ಕುಮಾರಸ್ವಾಮಿ ಅವರು ಆಸ್ಪತ್ರೆಗೆ ದಾಖಲಾಗಲಿದ್ದಾರೆ. ಶಸ್ತ್ರ ಚಿಕಿತ್ಸೆ ನಂತರ ಮೂರು ದಿನಗಳ ಕಾಲ ಆಸ್ಪತ್ರೆಯಲ್ಲಿ ವಿಶ್ರಾಂತಿ ಪಡೆದು ಮಾರ್ಚ್ 25ರಂದು ಹಿಂತಿರುಗಲಿದ್ದಾರೆ.

# ಮಾಜಿ ಶಾಸಕ ಹೆಚ್.ಪಿ. ರಾಜೇಶ್ ಬಿಜೆಪಿಗೆ ಸೇರ್ಪಡೆ

ಜಗಳೂರು, ಮಾ. 14- ಲೋಕಸಭಾ ಚುನಾವಣೆಗೆ ದಿನಾಂಕ ಪ್ರಕಟಗೊಳ್ಳುವ ಕ್ಷಣಗಣನೆ ದಿನಗಳಲ್ಲಿ ಜಗಳೂರು ಕ್ಷೇತ್ರದಲ್ಲಿ ರಾಜಕೀಯ ಧ್ರುವೀಕರಣ ಆರಂಭಗೊಂಡಿದ್ದು, ಕಾಂಗ್ರೆಸ್ ಮಾಜಿ ಶಾಸಕ ಎಚ್.ಪಿ. ರಾಜೇಶ್ ಇಂದು ತಮ್ಮ ಬೆಂಬಲಿಗರೊಂದಿಗೆ ಬಿಜೆಪಿ ಸೇರ್ಪಡೆಗೊಂಡಿದ್ದಾರೆ.

ಬೆಂಗಳೂರಿನ ಬಿಜೆಪಿ ಪಕ್ಷದ ಕಾರ್ಯಾಲಯದಲ್ಲಿ ಇಂದು ನಡೆದ ಸಮಾರಂಭದಲ್ಲಿ ರಾಜ್ಯಾಧ್ಯಕ್ಷ ವಿಜಯೇಂದ್ರ, ರಾಜೇಶ್ ಅವರನ್ನು ಆತ್ಮೀಯವಾಗಿ ಬರಮಾಡಿಕೊಂಡರು.

ಮಾಜಿ ಮುಖ್ಯಮಂತ್ರಿಗಳಾದ ಬಸವರಾಜ ಬೊಮ್ಮಾಯಿ, ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್. ಅಶೋಕ್, ಸಿ.ಟಿ. ರವಿ, ಸುನಿಲ್ ಕುಮಾರ್, ಶಾಸಕ ಬಿ.ಪಿ.ಹರೀಶ್, ದಾವಣಗೆರೆ ಸಂಸದ ಜಿ.ಎಂ. ಸಿದ್ದೇಶ್ವರ, ಎಂ.ಎಲ್.ಸಿ ರವಿಕುಮಾರ್, ಮಾಜಿ ಶಾಸಕ ಎಸ್.ವಿ. ರಾಮಚಂದ್ರ ಸೇರಿದಂತೆ ಜಿಲ್ಲೆಯ ಅನೇಕ ಮುಖಂಡರು ಸಭೆಯಲ್ಲಿ ಹಾಜರಿದ್ದರು.

ಮಾಜಿ ಶಾಸಕ ಎಸ್.ವಿ ರಾಮಚಂದ್ರ ಅವರ ವಿರುದ್ಧ 5 ಚುನಾವಣೆಗಳಲ್ಲಿ ನೇರ ನೇರ ಪೈಪೋಟಿ ನಡೆಸಿ, ಒಮ್ಮೆ ಮಾತ್ರ ಶಾಸಕರಾ



ಗಿರುವ ರಾಜೇಶ್ ಅವರ ಸೇರ್ಪಡೆಗೆ ಆರಂಭದಲ್ಲಿ ಶಾಸಕ ಎಸ್.ವಿ ರಾಮಚಂದ್ರ ವಿರೋಧ ವ್ಯಕ್ತಪಡಿಸಿದ್ದರು ಎಂಬ ಸುದ್ದಿಗಳು ಹರಿದಾಡಿದ್ದವು.

ಕಳೆದ ವಿಧಾನಸಭಾ ಚುನಾವಣೆಯಲ್ಲಿ ಪಕ್ಷೇತರರಾಗಿ ಸ್ಪರ್ಧಿಸಿ ರಾಷ್ಟ್ರೀಯ ಪಕ್ಷಗಳಿಗೆ ಸರಿಸಮನಾಗಿ ಮತಗಳನ್ನು ಪಡೆದು ಗಮನ ಸೆಳೆದಿದ್ದ ರಾಜೇಶ್ ಅವರ ಸಂಘಟನಾ ಶಕ್ತಿಯನ್ನು ಲೋಕಸಭಾ ಚುನಾವಣೆಯಲ್ಲಿ ಬಳಸಿಕೊಳ್ಳುವ ಹಿನ್ನೆಲೆಯಲ್ಲಿ ಬಿಜೆಪಿ ಪಕ್ಷದ ಚುನಾವಣಾ ತಂತ್ರಗಾರಿಕೆಯ ಭಾಗವಾಗಿ ಎಸ್.ವಿ. ರಾಮಚಂದ್ರ ಅವರು ರಾಜೇಶ್ ಅವರ ಸೇರ್ಪಡೆಗೆ ಸಮ್ಮತಿಸಿದ್ದಾರೆ ಎಂದು ಹೇಳಲಾಗಿದೆ.

ಜಗಳೂರು ವಿಧಾನಸಭಾ ಕ್ಷೇತ್ರದಲ್ಲಿ 3 ಬಾರಿ ಶಾಸಕರಾಗಿ ನಿಗಮ, ಮಂಡಳಿಯ ಅಧ್ಯಕ್ಷರಾಗಿ ಕ್ಷೇತ್ರದಲ್ಲಿ ತಮ್ಮದೇ ಆದ ಜನಪ್ರಿಯತೆ ಗಳಿಸಿಕೊಂಡಿರುವ ಎಸ್.ವಿ ರಾಮಚಂದ್ರ ರಾಜೇಶ್ ಅವರ ಪಕ್ಷ ಸೇರ್ಪಡೆ ಸಮಾರಂಭದಲ್ಲಿ ಹಾಜರಿದ್ದುದು ವಿಶೇಷವಾಗಿತ್ತು.

2008ರಲ್ಲಿ ಜಗಳೂರು ವಿಧಾನಸಭಾ ಕ್ಷೇತ್ರ ಎಸ್.ಟಿ ಮೀಸಲು ಆದಾಗ ಎಚ್.ಪಿ. ರಾಜೇಶ್ ಬಿಜೆಪಿಯಿಂದ ಸ್ಪರ್ಧಿಸಿದ್ದರು. ಆಗ ಕಾಂಗ್ರೆಸ್ ಪಕ್ಷದ ಎಸ್.ವಿ. ರಾಮಚಂದ್ರ ಗೆಲುವು ಸಾಧಿಸಿದ್ದರು.

2011ರಲ್ಲಿ ಶಾಸಕ ಸ್ಥಾನಕ್ಕೆ ಎಸ್.ವಿ ರಾಮಚಂದ್ರ, ರಾಜೀನಾಮೆ ನೀಡಿ ಬಿಜೆಪಿ ಸೇರಿದ್ದರು. ಆಗ ನಡೆದ ಉಪಚುನಾವಣೆಯಲ್ಲಿ ಎಚ್.ಪಿ. ರಾಜೇಶ್ ಅವರು ಪಕ್ಷೇತರರಾಗಿ ಸ್ಪರ್ಧಿಸಿ ಸೋಲು ಅನುಭವಿಸಿದ್ದರು, ರಾಮಚಂದ್ರ ಗೆಲುವು ಸಾಧಿಸಿದ್ದರು.

2013ರಲ್ಲಿ ಕಾಂಗ್ರೆಸ್ ಪಕ್ಷ ಸೇರಿದ್ದ ಎಚ್. ಪಿ. ರಾಜೇಶ್ ಅವರು 2018ರಲ್ಲಿ ನಡೆದ ಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಎಸ್.ವಿ. ರಾಮಚಂದ್ರ ಅವರನ್ನು ಸೋಲಿಸಿ ಮೊದಲ ಬಾರಿಗೆ ಶಾಸಕರಾಗಿ ಆಯ್ಕೆಯಾಗಿದ್ದರು.

2023ರ ಬದಲಾದ ರಾಜಕೀಯ ಸನ್ನಿವೇಶದಲ್ಲಿ ಕಾಂಗ್ರೆಸ್ ಪಕ್ಷದಲ್ಲಿದ್ದರೂ ರಾಜೇಶ್ ಅವರಿಗೆ ಟಿಕೆಟ್ ಸಿಗಲಿಲ್ಲ. ಬಿ.ದೇವೇಂದ್ರಪ್ಪ ಅವರಿಗೆ ಕಾಂಗ್ರೆಸ್ ಪಕ್ಷ ಟಿಕೆಟ್ ನೀಡಿತ್ತು. ಇದರಿಂದ ಪಕ್ಷದ ವಿರುದ್ಧ ಬಂಡಾಯವೆದ್ದು ಪಕ್ಷೇತರರಾಗಿ ಸ್ಪರ್ಧಿಸಿದ್ದ ಎಚ್‌ಪಿ ರಾಜೇಶ್, ಎರಡೂ ರಾಜಕೀಯ ಪಕ್ಷಗಳಿಗೆ ಸರಿಸಮನಾಗಿ ಮತಗಳನ್ನು ಪಡೆದ ಪರಿಣಾಮವಾಗಿ ರಾಮಚಂದ್ರ ಅಲ್ಪ ಮತಗಳ ಅಂತರದಲ್ಲಿ ಸೋಲು ಅನುಭವಿಸಿ ಕಾಂಗ್ರೆಸ್ ಪಕ್ಷದ ದೇವೇಂದ್ರಪ್ಪ ಗೆಲುವು ಸಾಧಿಸಿದ್ದರು.

# ಅತ್ಯಾಧುನಿಕ ಬೌಲಿಂಗ್ ಮೆಷಿನ್ ಅಳವಡಿಕೆಗೆ ನಾಳೆ ಚಾಲನೆ

ದಾವಣಗೆರೆ, ಮಾ. 14 - ದಾವಣಗೆರೆ ಕ್ರಿಕೆಟ್ ಅಕಾಡೆಮಿಯಲ್ಲಿ ಕ್ರಿಕೆಟ್ ಕಲಿಯುವ ಹಾಗೂ ಆಸಕ್ತಿ ಇರುವ ಮಕ್ಕಳಿಗೆ ಹೆಚ್ಚು ಅನುಕೂಲವಾಗಲಿ ಎಂದು ಲಿವರೇಜ್ ಯಂತ್ರ ಎನ್ನುವ ಕಂಪನಿಯ ಆಧುನಿಕ ಬೌಲಿಂಗ್ ಮೆಷಿನ್ ಅಳವಡಿಕೆಗೆ ನಾಡಿದ್ದು ದಿನಾಂಕ 16 ರಂದು ಮಧ್ಯಾಹ್ನ 2.30 ಕ್ಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಚಾಲನೆ ನೀಡಲಿದ್ದಾರೆಂದು ಸುದ್ದಿಗೋಷ್ಠಿಯಲ್ಲಿ ಅಕಾಡೆಮಿ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ತಿಳಿಸಿದರು.

ಮಧ್ಯ ಕರ್ನಾಟಕದಲ್ಲಿ ಇದೇ ಮೊದಲ ಬಾರಿಗೆ ಇಂತಹ ಒಂದು ಬೌಲಿಂಗ್ ಮೆಷಿನ್ ಪರಿಚಯಿಸಿದ ಹಿರಿಮೆ ದಾವಣಗೆರೆ ಕ್ರಿಕೆಟ್ ಅಕಾಡೆಮಿಗೆ ಸಲ್ಲುತ್ತದೆ ಎಂದರು.

ದೇಶದ ಅನೇಕ ಕ್ರಿಕೆಟ್ ಸ್ಟಾರ್‌ಗಳು ಈ ಯಂತ್ರವನ್ನು ತಮ್ಮ ಸ್ವಂತ ಅಭ್ಯಾಸಕ್ಕಾಗಿ ಬಳಸುತ್ತಿದ್ದು, ದಾವಣಗೆರೆ ಕ್ರಿಕೆಟ್ ಅಕಾಡೆಮಿಯಿಂದ ಮಕ್ಕಳಿಗೆ ಈ ಯಂತ್ರ ಅಭ್ಯಾಸಕ್ಕೆ ಸಿಗುತ್ತಿರುವುದು ಅದೃಷ್ಟವೇ ಸರಿ ಎಂದರು. ಸುಮಾರು ಮೂರೂವರೆ ಲಕ್ಷ ರೂ. ವೆಚ್ಚದ ಈ ಬೌಲಿಂಗ್ ಮೆಷಿನ್ ವಿವಿಧ ವೇಗದಲ್ಲಿ ಹಾಗೂ ವಿವಿಧ ಸ್ಪಿನ್ ಬೌಲಿಂಗ್ ಮಾಡುವ ಸಾಮರ್ಥ್ಯ ಹೊಂದಿದ್ದು, ಕ್ರಿಕೆಟ್ ಪಟುಗಳಿಗೆ ಹೆಚ್ಚಿನ ಅನುಕೂಲವಾಗಲಿದೆ. ಕ್ರಿಕೆಟ್ ಕೋಚ್ ಆರ್. ತಿಮ್ಮೇಶ್ ಅವರ ಬಹುದಿನದ ಕನಸು ಇದೀಗ ನನಸಾದಂತಾಗಿದೆ ಎಂದು ಹೇಳಿದರು.

ಅಕಾಡೆಮಿಯ ಮಕ್ಕಳಿಗಾಗಿ ಈ ಯಂತ್ರವನ್ನು ತರಿಸಲಾಗಿದ್ದು, ಮುಂದಿನ ದಿನಗಳಲ್ಲಿ ಇತರೆ ಆಟಗಾರರೂ ಬಳಸಲು ಶುಲ್ಕ ನಿಗದಿ ಮಾಡಲಾಗುವುದು ಎಂದರು.

ಪತ್ರಿಕಾಗೋಷ್ಠಿಯಲ್ಲಿ ಅಕಾಡೆಮಿಯ ಕೋಚ್ ಆರ್. ತಿಮ್ಮೇಶ್, ಗೋಪಾಲಕೃಷ್ಣ, ಬಿ. ರಮೇಶ್‌ನಾಯ್ಕ, ಬಿ. ಬಸವರಾಜ್, ಉಮೇಶ್ ಸಿರಿಗೆರೆ, ಯುವರಾಜ್, ಪ್ರದೀಪ್ ಉಪಸ್ಥಿತರಿದ್ದರು.

# ಚುನಾವಣಾ ಆಯುಕ್ತರಾಗಿ ಸಂಧು, ಜ್ಞಾನೇಶ್ ನೇಮಕ ಆಯ್ಕೆ ಪ್ರಕ್ರಿಯೆಗೆ ಅಧೀರ್ ರಂಜನ್ ಆಕ್ಷೇಪ

ನವದೆಹಲಿ, ಮಾ. 14 - ಮಾಜಿ ಅಧಿಕಾರಿಗಳಾದ ಸುಖಬೀರ್ ಸಿಂಗ್ ಸಂಧು ಹಾಗೂ ಜ್ಞಾನೇಶ್ ಕುಮಾರ್ ಅವರನ್ನು ನೂತನ ಚುನಾವಣಾ ಆಯುಕ್ತರನ್ನಾಗಿ ನೇಮಿಸಲಾಗಿದೆ.

ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರ ಅಧ್ಯಕ್ಷತೆಯ ಸಮಿತಿ ಈ ಆಯ್ಕೆಯ ನಿರ್ಧಾರ ಕೈಗೊಂಡಿದೆ. ಆದರೆ, ಸಮಿತಿ ಸದಸ್ಯರಾಗಿರುವ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಭಿನ್ನಮತದ ನಿಲುವು ತಳೆದಿದ್ದು, ಆಯ್ಕೆ ಪ್ರಕ್ರಿಯೆ ಪ್ರಶ್ನಿಸಿದ್ದಾರೆ.

ಚುನಾವಣಾ ಆಯುಕ್ತರ ಹುದ್ದೆಗೆ ಅಂತಿಮಗೊಳಿಸಿದ ಅಭ್ಯರ್ಥಿಗಳ ಪಟ್ಟಿ ನೀಡುವಂತೆ ಕೇಳಿದ್ದೆ. ಆದರೆ, ಆಯ್ಕೆ ಸಮಿತಿ ಸಭೆಯ ಮುನ್ನಾ ದಿನ 212 ಹೆಸರುಗಳನ್ನು ನನಗೆ ಕಳಿಸಲಾಗಿತ್ತು ಎಂದು ಚೌಧರಿ ಹೇಳಿದ್ದಾರೆ. ಆಯುಕ್ತರ ಹುದ್ದೆಗಾಗಿ ಶೋಧನಾ ಸಮಿತಿ ರಚಿಸಲಾಗಿತ್ತು. ಸಮಿತಿಯು ಆರು





ಹೆಸರುಗಳನ್ನು ಅಂತಿಮಗೊಳಿಸಿತ್ತು. ಬಹುಮತದ ಮೂಲಕ ಸಂಧು ಹಾಗೂ ಕುಮಾರ್ ಅವರನ್ನು ಆಯ್ಕೆ ಮಾಡಲಾಗಿದೆ ಎಂದು ಚೌಧರಿ ತಿಳಿಸಿದರು.

ಉತ್ಪಲ್ ಕುಮಾರ್ ಸಿಂಗ್, ಪ್ರದೀಪ್ ಕುಮಾರ್ ತ್ರಿಪಾಠಿ, ಜ್ಞಾನೇಶ್ ಕುಮಾರ್, ಇಂದೆವರ್ ಪಾಂಡೆ, ಸುಖಬೀರ್ ಸಿಂಗ್ ಸಂಧು, ಸುಧೀರ್ ಕುಮಾರ್ ಗಂಗಾಧರ್ ರಹಾಟೆ ಅವರ ಹೆಸರುಗಳನ್ನು ಸಮಿತಿಯ ಮುಂದಿರಿಸಲಾಗಿತ್ತು. ಎಲ್ಲರೂ ಮಾಜಿ ಅಧಿಕಾರಿಗಳಾಗಿದ್ದಾರೆ.

ಚುನಾವಣಾ ಆಯುಕ್ತರ ಆಯ್ಕೆ ಸಮಿತಿಗೆ ಪ್ರಧಾನ ಮಂತ್ರಿ ಅಧ್ಯಕ್ಷರಾಗಿದ್ದಾರೆ. ಗೃಹ ಸಚಿವ ಅಮಿತ್ ಷಾ ಅವರು ಸರ್ಕಾರದಿಂದ ನೇಮಕಗೊಂಡ ಸದಸ್ಯರಾಗಿದ್ದಾರೆ. ಲೋಕಸಭೆಯಲ್ಲಿ ಅತಿ ದೊಡ್ಡ ಪ್ರತಿಪಕ್ಷದ ನಾಯಕ ಇನ್ನೊರ್ವ ಸದಸ್ಯ.

ಈ ಬಗ್ಗೆ ಮಾತನಾಡಿರುವ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ, ಸಂಭವನೀಯರ ಹಿನ್ನೆಲೆ, ಅನುಭವ ಹಾಗೂ ಪ್ರಾಮಾಣಿಕತೆ ಬಗ್ಗೆ ತಿಳಿದಿಲ್ಲ. ನೇಮಕ ಪ್ರಕ್ರಿಯೆಯಲ್ಲಿ ಲೋಪವಾಗಿರುವುದು ನನಗೆ ಇಷ್ಟವಾಗಿಲ್ಲ ಎಂದು ಹೇಳಿದರು.

ಕುಮಾರ್ ಅವರು ಗೃಹ ಸಚಿವಾಲಯದಲ್ಲಿ ಕಾರ್ಯನಿರ್ವಹಿಸುವ ವೇಳೆ 370ನೇ ವಿಧಿ ರದ್ದುಗೊಳಿಸಲಾಗಿತ್ತು. ಸಂಧು ಅವರು ಉತ್ತರಾಖಂಡದ ಮಾಜಿ ಮುಖ್ಯ ಕಾರ್ಯದರ್ಶಿಯಾಗಿದ್ದರು. ಕುಮಾರ್ ಕೇರಳ ಹಾಗೂ ಸಂಧು ಉತ್ತರಾಖಂಡ ತಂಡದ ಅಧಿಕಾರಿಗಳಾಗಿದ್ದಾರೆ.

# ನಗರದಲ್ಲಿ ಇಂದು ಭಾರತ್ ಅಕ್ಕಿ ವಿತರಣೆ

ದೇವರಾಜ ಅರಸು ಬಡಾವಣೆ 'ಸಿ' ಬ್ಲಾಕ್‌ನ ಡಬಲ್ ರೋಡ್ ನಲ್ಲಿ ಬೆಳಗ್ಗೆ 10 ಗಂಟೆಗೆ ಭಾರತ್ ಅಕ್ಕಿ ವಿತರಣಾ ಕಾರ್ಯಕ್ರಮ ನಡೆಯಲಿದೆ. ಯಶವಂತ್ ರಾವ್ ಜಾಧವ್, ರಾಜನಹಳ್ಳಿ ಶಿವಕುಮಾರ್, ದೇವರಮನೆ ಶಿವಕುಮಾರ್, ಎಂ.ವಿ. ಜಯಪ್ರಕಾಶ್ ಮಾಗಿ ಭಾಗವಹಿಸುವರು.


ಅಭಿನಂದನೆಗಳು







ದಾವಣಗೆರೆ ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ಶಿಕ್ಷಣ ಅಧ್ಯಯನ ವಿಭಾಗದ ಸಹ ಪ್ರಾಧ್ಯಾಪಕರಾದ ಡಾ. ವೆಂಕಟೇಶ ಕೆ. ಇವರ ಮಾರ್ಗದರ್ಶನದಲ್ಲಿ ಪಿ.ಎಚ್.ಡಿ ಮಹಾಪ್ರಬಂಧಗಳನ್ನು ದಾವಣಗೆರೆ ವಿಶ್ವವಿದ್ಯಾನಿಲಯಕ್ಕೆ ಸಲ್ಲಿಸಿ ದಿನಾಂಕ : 12.03.2024 ರಂದು ನಡೆದ ಘಟಿಕೋತ್ಸವ ಸಮಾರಂಭದಲ್ಲಿ ಪಿ.ಎಚ್.ಡಿ ಪದವಿ ಸ್ವೀಕರಿಸಿದ ನಮ್ಮ ಆತ್ಮೀಯ ಸ್ನೇಹಿತರಾದ ಶ್ರೀ ಚೇತನ ಕುಮಾರ್ ಕೆ.ಎಂ., ಸಹಾಯಕ ಪ್ರಾಧ್ಯಾಪಕರು, ಸ್ನಾತಕೋತ್ತರ ಶಿಕ್ಷಣ ಅಧ್ಯಯನ ವಿಭಾಗ ದಾವಣಗೆರೆ ವಿಶ್ವವಿದ್ಯಾನಿಲಯ, ಶ್ರೀ ಮರುಳಸಿದ್ದಪ್ಪ ಎನ್. ಟಿ. ಸಹಾಯಕ ಪ್ರಾಧ್ಯಾಪಕರು, ಟಿ.ಎಮ್.ಎ.ಇ.ಎಸ್ ಶಿಕ್ಷಣ ಮಹಾವಿದ್ಯಾಲಯ, ಹರಪನಹಳ್ಳಿ ಹಾಗೂ ಶ್ರೀಮತಿ ಆಶಾ ಜಿ. ಹೆಚ್., ಸಹಾಯಕ ಪ್ರಾಧ್ಯಾಪಕರು, ಮಾಕನೂರು ಮಲ್ಲೇಶಪ್ಪ ಶಿಕ್ಷಣ ಮಹಾವಿದ್ಯಾಲಯ, ದಾವಣಗೆರೆ ಇವರಿಗೆ ವಿಶೇಷ ಅಭಿನಂದನೆಗಳು.

ಪಿಎಚ್.ಡಿ ಪದವಿ ಪಡೆದ ಈ ಮೂವರು ಸ್ನೇಹಿತರಿಗೆ ಅಭಿನಂದನೆ ಸಲ್ಲಿಸುವವರು
ಆತ್ಮೀಯ ಗೆಳೆಯರಾದ

ಶ್ರೀ ಸುನೀಲ್ ಕುಮಾರ್ ಎಸ್.ಜಿ. ಉಪಪ್ರಾಂಶುಪಾಲರು,
ವಿಶ್ವಚೇತನ ವಿದ್ಯಾನಿಕೇತನ ಪದವಿ ಪೂರ್ವ ಕಾಲೇಜು, ದಾವಣಗೆರೆ.
ಶ್ರೀ ಚಂದ್ರಶೇಖರ್ ಎಮ್.ಕೆ. ಸಹಾಯಕ ಪ್ರಾಧ್ಯಾಪಕರು,
ಬಿ.ಎ.ಜೆ.ಎಸ್.ಎಸ್ ಕಲಾ ಮತ್ತು ವಾಣಿಜ್ಯ ಮಹಿಳಾ ಮಹಾವಿದ್ಯಾಲಯ, ರಾಣೇಬೆನ್ನೂರು.


# ದೇವರಹಟ್ಟಿಯಲ್ಲಿ ಇಂದು ರಥೋತ್ಸವ



ಶ್ರೀ ದೇವರಹಟ್ಟಿ ಬಸವಣ್ಣನ ರಥೋತ್ಸವವು ಇಂದು ಸಂಜೆ 6.30 ಗಂಟೆಗೆ ನೆರವೇರಲಿದೆ. ನಾಳೆ ಶನಿವಾರ ಸಂಜೆ 4 ಕ್ಕೆ ಬೆಲ್ಲದ ಬಂಡಿ ಮತ್ತು ಹೋರಿ ಗಳ ಮೆರವಣಿಗೆ ಜಾತ್ರೆ, ಸಂಜೆ 7.30ಕ್ಕೆ ಬಸವಣ್ಣನ ಓಕಳಿ, ಗಂಗಾ ಪೂಜೆ ಕಾರ್ಯಕ್ರಮದ ನಂತರ ದೇವರ ಗುಡಿ ತುಂಬುವುದು. ನಾಡಿದ್ದು ಭಾನುವಾರ ಬೆಳಿಗ್ಗೆ 9 ಗಂಟೆಗೆ ಪಲ್ಲಕ್ಕಿ ಸೇವೆ ನಡೆಯಲಿದೆ.

# ನಗರದಲ್ಲಿ ಇಂದು ಬ್ರೆಸ್ಟ್ ಕ್ಯಾನ್ಸರ್ ಜಾಗೃತಿ ಅಭಿಯಾನ

ದಾವಣಗೆರೆ ಲೇಡೀಸ್ ಸರ್ಕಲ್ -168 ವತಿಯಿಂದ ಬ್ರೆಸ್ಟ್ ಕ್ಯಾನ್ಸರ್ ಬಗ್ಗೆ ಜಾಗೃತಿ ಅಭಿಯಾನವನ್ನು ಇಂದು ಸಂಜೆ 5 ರಿಂದ 6ರವರೆಗೆ ಸ್ಥಳೀಯ ವಿದ್ಯಾನಗರ ಪಾರ್ಕ್‌ನಲ್ಲಿ ಹಮ್ಮಿಕೊಳ್ಳಲಾಗಿದೆ. ವಿವರಕ್ಕೆ ಮೊಬೈಲ್ : 97409 84864 ಅಥವಾ 81056 96419 ರಲ್ಲಿ ಸಂಪರ್ಕಿಸಬಹುದು.

# ಮಮತಾ ಬ್ಯಾನರ್ಜಿ ಹಣೆಗೆ ಪೆಟ್ಟು



ಕೊಲ್ಕೊತಾ, ಮಾ. 14 – ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರ ಹಣೆಗೆ ಪ್ರಮುಖ ಪೆಟ್ಟಾಗಿದೆ ಎಂದು ತೃಣಮೂಲ ಕಾಂಗ್ರೆಸ್ ಪಕ್ಷ ತಿಳಿಸಿದೆ.

ಸರ್ಕಾರಿ ಆಸ್ಪತ್ರೆಯಲ್ಲಿ ಅವರಿಗೆ ಚಿಕಿತ್ಸೆ ನೀಡಲಾಗಿದ್ದು, ವೈದ್ಯಕೀಯ ಪರೀಕ್ಷೆ ನಡೆಸಲಾಗಿದೆ. ನಂತರ ಅವರನ್ನು ಆಸ್ಪತ್ರೆಯಿಂದ ಬಿಡುಗಡೆ ಮಾಡಲಾಗಿದೆ.

ದಕ್ಷಿಣ ಕೊಲ್ಕೊತಾದ ಕಾಳಿಘಾಟ್‌ನಲ್ಲಿರುವ ಮನೆಯಲ್ಲಿ ಮಮತಾ ಬ್ಯಾನರ್ಜಿ ಬಿದ್ದು ಪೆಟ್ಟಾಗಿದೆ ಎಂದು ಅವರ ಕುಟುಂಬದವರು ತಿಳಿಸಿದ್ದಾರೆ.




ಬಡವರ ಪಾಲಿನ ಆರೋಗ್ಯ ಮಾತೆ
ಶ್ರೀಮತಿ ಡಾ. ಪ್ರಭಾ ಮಲ್ಲಿಕಾರ್ಜುನ್
ಅವರಿಗೆ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.
ಶ್ರೀಮತಿ ಸವಿತಾ ಗಣೇಶ್ ಹುಲ್ಲುಮನೆ
ಸದಸ್ಯರು ಮಹಾನಗರ ಪಾಲಿಕೆ, 35ನೇ ವಾರ್ಡ್, ದಾವಣಗೆರೆ.
ಶ್ರೀ ದುರ್ಗಾಂಬಿಕಾ ದೇವಸ್ಥಾನ ಟ್ರಸ್ಟ್ (ರಿ.) ನಿಟುವಳ್ಳಿ - ದಾವಣಗೆರೆ.
ಮಹಾನಗರ ಪಾಲಿಕೆ 35ನೇ ವಾರ್ಡ್ ಕಾಂಗ್ರೆಸ್ ಕಾರ್ಯಕರ್ತರು



# ಕರ್ನಾಟಕ ಸರ್ಕಾರ. ಗ್ಯಾರಂಟಿ ಸರ್ಕಾರ

# ಗೃಹ ಜ್ಯೋತಿ

## ಪ್ರತಿ ಮನೆಗೆ 200 ಯೂನಿಟ್‌ವರೆಗೆ ವಿದ್ಯುತ್ ಉಚಿತ

ನೋಂದಣಿಯಾದ ಒಟ್ಟು ಸಂಖ್ಯೆ **1.65 ಕೋಟಿ**

ಫಲಾನುಭವಿಗಳ ಒಟ್ಟು ಸಂಖ್ಯೆ **1.59 ಕೋಟಿ**

ಒಟ್ಟು ಸಬ್ಸಿಡಿ ಮೊತ್ತ **ರೂ.4,400/- ಕೋಟಿ**

**96%** ಫಲಾನುಭವಿಗಳು - ಕರ್ನಾಟಕದಾದ್ಯಂತ

ನೋಂದಣಿಗೆ ಯಾವುದೇ ಅಂತಿಮ ದಿನಾಂಕ ಇರುವುದಿಲ್ಲ

ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತ
ವಿದ್ಯುತ್ ಬಿಲ್/ ELECTRICITY BILL
GSTN No.: 29AACCB1412G1Z5

O/o. AEE(Ele.) N7 - KURUBARAHALLI

ಗ್ರಾಹಕರ ಆರ್‌ಆರ್ ಸಂಖ್ಯೆ

**Account Details**

| | |
|---|---|
| ಆರ್.ಆರ್. ಸಂಖ್ಯೆ/ RR Nos | N3EH4536 |
| ಖಾತೆ ಸಂಖ್ಯೆ/Acc.ID | 5107756000 |
| ಮಾ.ಓ. ಸಂಕೇತ/MR Code | 14002768 |

**ವೈಯಕ್ತಿಕ ವಿವರಗಳು/Personal Details**
ಹೆಸರು ಮತ್ತು ವಿಳಾಸ/Name and Address

ಗೃಹ ಜ್ಯೋತಿ ಅರ್ಹತೆಯ ವಿವರಗಳು

**ಸಂಪರ್ಕದ ವಿವರಗಳು/Connection Details**

| | |
|---|---|
| ಜಕಾತಿ/Tariff | 1LT2A |
| ಮಂ. ಪ್ರಮಾಣ/Sanc Load | 3KW + OHP |
| ಗೃಹ ಜ್ಯೋತಿ/GJS Reg Date | 27-06-2023 |
| ಸರಾಸರಿ/Average [FY22-23] | 57.17 |
| ಅರ್ಹ/Entitlement Units | 63.0 |

ಉಚಿತ ಮತ್ತು ಬಿಲ್ ಮಾಡಬಹುದಾದ ಯೂನಿಟ್ ವಿವರಗಳು

**ಬಿಲ್ ವಿವರ/Billing Details**

| | |
|---|---|
| ಬಿಲ್ಲಿಂಗ್ ಅವಧಿ/Billing Period | 10/10/2023 to 10/11/2023 |
| ರೀಡಿಂಗ್ ದಿನಾಂಕ/Rdng Date | 10-11-2023 |
| ಬಿಲ್ ಸಂಖ್ಯೆ/Bill No. | 43133023B100092 |

**ಬಳಕೆಯ ವಿವರ/Consumption Detail**

| | |
|---|---|
| ಇಂದಿನ ಮಾಪನ/Pres Rdg. | 6312 |
| ಹಿಂದಿನ ಮಾಪನ/Prev Rdg. | 6252 |
| ಮಾಪನ ಸ್ಥಿರಾಂಕ/Constant | 1 |
| ಬಳಕೆ/Consumption Units | |
| ಸರಾಸರಿ/Average | 60 |
| ದಾಖಲಿತ ಬೇಡಿಕೆ/Recorded MD | 1.7KW |
| ಪವರ್ ಫ್ಯಾಕ್ಟರ್/Power Factor | 1.0 |
| ಸಂ. ಪ್ರಮಾಣ/Connected Load | 0.0KW |

ಅರ್ಹವಾದ ಯೂನಿಟ್ ವಿವರಗಳು

| | |
|---|---|
| ಅರ್ಹ ಯೂನಿಟ್/Eligible for subsidy | 60 |
| ಪಾವತಿ ಯೂನಿಟ್/Units chargeable | 0 |

ವಿದ್ಯುತ್‌ನ ಒಟ್ಟು ಬಿಲ್ ಮೊತ್ತ

**ಬಳಸಿದ ಯೂನಿಟ್ ಬಿಲ್ ಮೊತ್ತ/Bill for Consumed Unit**

| | | |
|---|---|---|
| ನಿಗದಿತ ಶುಲ್ಕ/Fixed Charges (Unit, Rate, Amount) | | |
| 3.0KW | 110 | 330.00 |
| ವಿದ್ಯುತ್ ಶುಲ್ಕ/Energy Charges (Unit, Rate, Amount) | | |
| 60 | 4.75 | 285.00 |
| ಇಂಧನ ಹೊಂದಾಣಿಕೆ ಶುಲ್ಕ/FPPCA (Unit, Rate, Amt) | | |
| 60 | 0.35 | 21.00 |
| ತೆರಿಗೆ/Tax @ 9% | | 25.65 |
| ಉಪ ಮೊತ್ತ-1/Sub-Total-1 | | 661.65 |

ಗೃಹ ಜ್ಯೋತಿ ಸಬ್ಸಿಡಿ ಮೊತ್ತ

**ಗೃಹ ಜ್ಯೋತಿ ಅನುದಾನ/Gruha Jyothi Subsidy by GoK**

| | | |
|---|---|---|
| ನಿಗದಿತ ಶುಲ್ಕ/Fixed Charges (Unit, Rate, Amount) | | |
| 3.0KW | 110 | 330.00 |
| ವಿದ್ಯುತ್ ಶುಲ್ಕ/Energy Charges (Unit, Rate, Amount) | | |
| 60 | 4.75 | 285.00 |
| ಇಂಧನ ಹೊಂದಾಣಿಕೆ ಶುಲ್ಕ/FPPCA (Unit, Rate, Amt) | | |
| 60 | 0.35 | 21.00 |
| ತೆರಿಗೆ/Tax @ 9% | | 25.65 |
| ಉಪ ಮೊತ್ತ-2/Sub-Total-2 | | 661.65 |

| | |
|---|---|
| ಬಿಲ್ ಮೊತ್ತ/Bill Amount (1-2) | ₹ 0.0 |
| Additional Charges | |
| ಪಿ.ಎಫ್. ದಂಡ/PF Penalty | 0.00 |
| ಹೆ.ಲೋ. ದಂಡ/MD Penalty | 0.00 |
| ಬಡ್ಡಿ/Interest | 0.00 |
| ಇತರೇ/Others | 0.00 |
| ಡೆಬಿಟ್ or ಕ್ರೆಡಿಟ್/Debit or Credit | 0.00 |
| ಪ್ರಸ್ತುತ ಬೇಡಿಕೆ/Cur. Demand Payable | ₹ 0.00 |
| ಬಾಕಿ/Arrears | 0.00 |
| ಪಾವತಿಯ ಮೊತ್ತ/Net Payable | ₹ 0.00 |
| ಪಾವತಿಗೆ ಕಡೇಯ ದಿನಾಂಕ/Due Date | 24/11/2023 |

ಪಾವತಿ ಮಾಡಬೇಕಾದ ಬಿಲ್ ಮೊತ್ತ ರೂ. 0.00

5107756000#0 10/11/2023 10:45
For any billing related clarification call 1912 / Call Subdivision



**ಶ್ರೀ ಸಿದ್ದರಾಮಯ್ಯ**
ಸನ್ಮಾನ್ಯ ಮುಖ್ಯಮಂತ್ರಿಗಳು



**ಶ್ರೀ ಡಿ.ಕೆ. ಶಿವಕುಮಾರ್**
ಮಾನ್ಯ ಉಪ ಮುಖ್ಯಮಂತ್ರಿಗಳು

**ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರ** ಪ್ರಗತಿಪರ ಮತ್ತು ಸುಸ್ಥಿರ ನಾಯಕತ್ವದಡಿಯಲ್ಲಿ ಜನತೆಗೆ ಸುಭದ್ರ ಬದುಕು ಕಟ್ಟಿಕೊಟ್ಟ 'ಕರ್ನಾಟಕ ಮಾದರಿ ಸರ್ಕಾರ'

ಶಕ್ತಿ — ಮಹಿಳೆಯರಿಗೆ ಬಸ್ ಪ್ರಯಾಣ ಉಚಿತ: ಪ್ರತಿನಿತ್ಯ **62 ಲಕ್ಷ** ಮಹಿಳಾ ಪ್ರಯಾಣಿಕರು. ಇದುವರೆಗೆ 136 ಕೋಟಿ ಟ್ರಿಪ್

ಗೃಹಲಕ್ಷ್ಮಿ — ಪ್ರತಿ ಮನೆಯೊಡತಿಗೆ ಪ್ರತಿ ತಿಂಗಳು ₹2000: **1.09 ಕೋಟಿ** ಖಾತೆಗಳಿಗೆ ನಗದು ವರ್ಗಾವಣೆ



ಸನ್ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ದರಾಮಯ್ಯನವರು ಮತ್ತು ಮಾನ್ಯ ಉಪ ಮುಖ್ಯಮಂತ್ರಿ ಶ್ರೀ ಡಿ.ಕೆ. ಶಿವಕುಮಾರ್ ರವರು ಗೃಹ ಜ್ಯೋತಿ ಗ್ಯಾರಂಟಿ ಯೋಜನೆಗೆ ಚಾಲನೆ ನೀಡುತ್ತಿರುವುದು.

ಅನ್ನಭಾಗ್ಯ — ಬಡವರಿಗೆ ಪ್ರತಿ ತಿಂಗಳು 10 kg: **3.99 ಕೋಟಿ** ಫಲಾನುಭವಿಗಳಿಗೆ 3751 ಕೋಟಿ ರೂ. ವರ್ಗಾವಣೆ

ಯುವನಿಧಿ — ಪ್ರತಿ ತಿಂಗಳು ನಿರುದ್ಯೋಗ ಭತ್ಯೆ ₹3000 | ₹1500: **4.5 ಲಕ್ಷ** ಯುವ ಜನರಿಗೆ ನೆರವಾಗುವ ನಿರೀಕ್ಷೆ

## ನುಡಿದಂತೆ ನಡೆದಿದ್ದೇವೆ...

ಕರ್ನಾಟಕದಲ್ಲಿ **96% ಗೂ ಹೆಚ್ಚಿನ ಜನರು** ಒಂದು ಅಥವಾ ಹೆಚ್ಚು ಗ್ಯಾರಂಟಿ ಯೋಜನೆಗಳ ಅನುಕೂಲವನ್ನು ಪಡೆಯುತ್ತಿರುವರು.

"ಸಾರ್ವಜನಿಕ ಆಸ್ತಿ ಪಾಸ್ತಿ ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು ಪ್ರತಿಯೊಬ್ಬ ಭಾರತೀಯನ ಮೂಲಭೂತ ಕರ್ತವ್ಯ"

CMofKarnataka https://dipr.karnataka.gov.in/

ಕರ್ನಾಟಕ ವಾರ್ತೆ

ಬ್ರಾಹ್ಮಣ ಸಮುದಾಯ ಮಾಲೀಕತ್ವದ ಮತ್ತು ಸಂಪಾದಕತ್ವದ ಪತ್ರಿಕೆಗಳಿಗೆ ಪ್ರೋತ್ಸಾಹ ರೂಪದ ಜಾಹೀರಾತು

## ಹರಪನಹಳ್ಳಿಯಲ್ಲಿ ನಾಳೆ ಬಿಜೆಪಿ ನೂತನ ಪದಾಧಿಕಾರಿಗಳ ಪದಗ್ರಹಣ ಕಾರ್ಯಕ್ರಮ



ಹರಪನಹಳ್ಳಿ, ಮಾ.14- ಬಿಜೆಪಿ ನೂತನ ಅಧ್ಯಕ್ಷರ ಪದಗ್ರಹಣ ಕಾರ್ಯಕ್ರಮವು ನಾಡಿದ್ದು ದಿನಾಂಕ 16 ರ ಶನಿವಾರ ಬೆಳಿಗ್ಗೆ 10.30ಕ್ಕೆ ಇಲ್ಲಿನ ತರಳಬಾಳು ಕಲ್ಯಾಣ ಮಂಟಪದಲ್ಲಿ ನಡೆಯಲಿದ್ದು, ಇಲ್ಲಿರುವ ಭಿನ್ನಾಭಿಪ್ರಾಯ ವನ್ನು ರಾಜ್ಯ ನಾಯಕರು ಸರಿಪಡಿಸುತ್ತಾರೆ ಎಂದು ಜಿಲ್ಲಾ ಪ್ರಧಾನ ಕಾರ್ಯದರ್ಶಿ ಸಂಜೀವರೆಡ್ಡಿ ತಿಳಿಸಿದ್ದಾರೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗ್ಯಾರಂಟಿಗಳ ಹಾಗೂ ಸುಳ್ಳು ಭರವಸೆಗಳ ಮೂಲಕ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದ ನಂತರ ಬಿಜೆಪಿ ಕಾರ್ಯಕರ್ತರಲ್ಲಿ ನಿರ್ಲಿಪ್ತ ಭಾವನೆ ಇತ್ತು, ಬಿ.ವೈ.ವಿಜಯೇಂದ್ರ ಪಕ್ಷದ ಚುಕ್ಕಾಣಿ ಹಿಡಿದ ನಂತರ ಕಾರ್ಯಕರ್ತರಲ್ಲಿ ಹೊಸ ಹುಮ್ಮಸ್ಸು ಬಂದು, ಬಿಜೆಪಿ ಪಾರ್ಟಿಗೆ ಶಕ್ತಿ ತುಂಬಿದ್ದಾರೆ ಎಂದು ಹೇಳಿದರು.

ಪದಗ್ರಹಣ ಕಾರ್ಯಕ್ರಮಕ್ಕೆ ಶಾಸಕ ಭೈರತಿ ಬಸವರಾಜ್, ಸಂಸದ ಜಿ.ಎಂ.ಸಿದ್ದೇಶ್ವರ, ಜಿ.ಕರುಣಾಕರ ರೆಡ್ಡಿ ಸೇರಿದಂತೆ, ರಾಜ್ಯ ನಾಯಕರು ಆಗಮಿಸುತ್ತಾರೆ.

ನೂತನ ಅಧ್ಯಕ್ಷ ಕೆ.ಲಕ್ಷ್ಮಣ ಮಾತನಾಡಿ, ಕಳೆದ 32-33 ವರ್ಷಗಳಿಂದ ಬಿಜೆಪಿ ಪಕ್ಷದಲ್ಲಿ ಸೇವೆ ಸಲ್ಲಿಸಿದ್ದೇನೆ, ನನ್ನ ಸೇವೆ ಗುರುತಿಸಿ, ಕೊಟ್ಟ ಹುದ್ದೆಗಳನ್ನು ಸಮರ್ಥವಾಗಿ ನಡೆಸಿಕೊಂಡು ಬಂದಿದ್ದೇನೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ರಾಜ್ಯ ಸಹಕಾರ ಬ್ಯಾಂಕ್ ಅಧ್ಯಕ್ಷ ಜಿ.ನಂಜನಗೌಡ, ಜಿಲ್ಲಾ ಪ್ರ.ಕಾರ್ಯದರ್ಶಿ ಕೆ.ರಾಘವೇಂದ್ರ, ಹರಪನಹಳ್ಳಿ ಉಸ್ತುವಾರಿ ಬ್ಯಾಲಹುಣಸಿ ರಾಮಣ್ಣ, ಜಿಲ್ಲಾ ಕಾರ್ಯದರ್ಶಿ ಕುಸುಮಾ, ಪುರಸಭಾ ಮಾಜಿ ಅಧ್ಯಕ್ಷ ಎಚ್.ಎಂ.ಅಶೋಕ, ಕಣವಿಹಳ್ಳಿ ಮಂಜುನಾಥ, ಮಂಜಾನಾಯ್ಕ, ಮುತ್ತಿಗೆ ವಾಗೀಶ, ಬಿ.ವೈ. ವೆಂಕಟೇಶನಾಯ್ಕ, ಚೆನ್ನನಗೌಡ, ಉದಯಕುಮಾರ, ಸಿಂಗ್ರಿಹಳ್ಳಿ ಮರಿಯಪ್ಪ, ಹಲುವಾಗಲು ದ್ಯಾಮಜ್ಜ, ಕಡತಿ ರಮೇಶ, ಜಟ್ಟೆಪ್ಪ, ಕಡಕೋಳ ಸಿದ್ದಣ್ಣ ಉಪಸ್ಥಿತರಿದ್ದರು.

## ಇಂದು ಸಂಸದರ ರಿಪೋರ್ಟ್ ಕಾರ್ಡ್ ಬಿಡುಗಡೆ


**ಲೋಕಸಭಾ ಕ್ಷೇತ್ರದ ಚುನಾವಣಾ ಕಾರ್ಯಾಲಯ ಉದ್ಘಾಟನೆ**

ದಾವಣಗೆರೆ ಲೋಕಸಭಾ ಕ್ಷೇತ್ರದಲ್ಲಿ ಕಳೆದ 10 ವರ್ಷಗಳಲ್ಲಿ ಲೋಕಸಭಾ ಸದಸ್ಯ ಜಿ.ಎಂ. ಸಿದ್ದೇಶ್ವರ ಅವರು ಯಶಸ್ವಿಯಾಗಿ ಅನುಷ್ಠಾನಗೊಳಿಸಿರುವ ಯೋಜನೆಗಳ ಸಮಗ್ರ ಮಾಹಿತಿಯುಳ್ಳ ಸಾಧನೆಯ ಪರ್ವ 'ರಿಪೋರ್ಟ್ ಕಾರ್ಡ್' ಬಿಡುಗಡೆ ಹಾಗೂ ದಾವಣಗೆರೆ ಲೋಕಸಭಾ ಕ್ಷೇತ್ರದ ಚುನಾವಣಾ ಕಾರ್ಯಾಲಯ ಉದ್ಘಾಟನೆ ಕಾರ್ಯವನ್ನು ಇಂದು ಹಮ್ಮಿಕೊಳ್ಳಲಾಗಿದೆ.

ವಾಣಿ ಹೊಂಡ ಹಳೇ ಶೋ ರೂಂ ಆವರಣದಲ್ಲಿ ಬೆಳಿಗ್ಗೆ 11ಕ್ಕೆ ನಡೆಯುವ ಕಾರ್ಯಕ್ರಮದಲ್ಲಿ ವಿಧಾನಸಭಾ ವಿರೋಧ ಪಕ್ಷದ ನಾಯಕ ಆರ್. ಅಶೋಕ್ ಅವರು ರಿಪೋರ್ಟ್ ಕಾರ್ಡ್ ಬಿಡುಗಡೆ ಮಾಡಲಿದ್ದಾರೆ. ವಿಧಾನ ಪರಿಷತ್ ವಿರೋಧ ಪಕ್ಷದ ಮುಖ್ಯ ಸಚೇತಕ ಎನ್. ರವಿಕುಮಾರ್, ಸಂಸದ ಜಿ.ಎಂ. ಸಿದ್ದೇಶ್ವರ, ಶಾಸಕರುಗಳಾದ ಭೈರತಿ ಬಸವರಾಜ್, ಬಿ.ಪಿ. ಹರೀಶ್, ವಿಧಾನ ಪರಿಷತ್ ಸದಸ್ಯ ಕೆ.ಎಸ್. ನವೀನ್ ಉಪಸ್ಥಿತರಿರಲಿದ್ದಾರೆ.

# ಏಕಕಾಲಕ್ಕೆ ಚುನಾವಣೆ ನಡೆಸಲು ಶಿಫಾರಸ್ಸು

## ಸಂವಿಧಾನಕ್ಕೆ ಹೆಚ್ಚು ತಿದ್ದುಪಡಿಗಳಿಲ್ಲದೇ ಬದಲಾವಣೆ ತರಬೇಕು ಎಂದು ಕೋವಿಂದ್ ಸಮಿತಿ ವರದಿ



ನವದೆಹಲಿ, ಮಾ. 14 - ಲೋಕಸಭೆ ಹಾಗೂ ರಾಜ್ಯ ವಿಧಾನಸಭೆಗಳಿಗೆ ಏಕಕಾಲಕ್ಕೆ ಚುನಾವಣೆ ನಡೆಸಲು ಮೊದಲ ಹಂತದಲ್ಲಿ ಕ್ರಮ ತೆಗೆದುಕೊಳ್ಳಬೇಕು. ನಂತರ ಸ್ಥಳೀಯ ಸಂಸ್ಥೆಗಳ ಚುನಾವಣೆಗಳನ್ನೂ ಜೊತೆಯಲ್ಲೇ ನಡೆಸಬೇಕು ಎಂದು ಮಾಜಿ ರಾಷ್ಟ್ರಪತಿ ರಾಮನಾಥ ಕೋವಿಂದ್ ಅವರ ನೇತೃತ್ವದ ಸಮಿತಿ ಶಿಫಾರಸ್ಸು ಮಾಡಿದೆ.

ರಾಷ್ಟ್ರಪತಿ ದ್ರೌಪದಿ ಮುರ್ಮು ಅವರಿಗೆ ವರದಿ ಸಲ್ಲಿಸಲಾಗಿದ್ದು, ಏಕಕಾಲದ ಚುನಾವಣೆಯಿಂದ ಅಭಿವೃದ್ಧಿ ಹಾಗೂ ಸಾಮಾಜಿಕ ಸಾಮರಸ್ಯ ಹೆಚ್ಚಾಗುತ್ತದೆ. ಪ್ರಜಾಪ್ರಭುತ್ವದ ತಳಹದಿ ಬಲವಾಗುತ್ತದೆ ಎಂದು ತಿಳಿಸಲಾಗಿದೆ.

ಕೋವಿಂದ್ ಅವರ ನೇತೃತ್ವದ ಸಮಿತಿಯು 18 ಸಾವಿರಕ್ಕೂ ಹೆಚ್ಚು ಪುಟಗಳ ಬೃಹತ್ ವರದಿಯನ್ನು ಸಲ್ಲಿಸಿದೆ. ಅತಂತ್ರ ಲೋಕಸಭೆ ಇಲ್ಲವೇ ಅವಿಶ್ವಾಸ ನಿಲುವಳಿ ಸೇರಿದಂತೆ ಇಂತಹ ಸಂದರ್ಭಗಳಲ್ಲಿ ಹೊಸ ಚುನಾವಣೆ ನಡೆಸಬೇಕು ಎಂದೂ ಸಮಿತಿಯ ಶಿಫಾರಸ್ಸಿನಲ್ಲಿ ತಿಳಿಸಲಾಗಿದೆ.

ಲೋಕಸಭೆಗೆ ಮರು ಚುನಾವಣೆ ನಡೆಸಿದಾಗ, ಸಂಪೂರ್ಣ ಐದು ವರ್ಷಗಳ ಬದಲು, ಉಳಿದ ಅವಧಿಗಾಗಿ ಉಪ ಚುನಾವಣೆ ನಡೆಸಬೇಕು ಎಂದೂ ಶಿಫಾರಸ್ಸು ಮಾಡಲಾಗಿದೆ. ವಿಧಾನಸಭೆಯ ವಿಷಯದಲ್ಲೂ ಇದೇ ರೀತಿಯ ಕ್ರಮ ತೆಗೆದುಕೊಳ್ಳಬೇಕು ಎಂದು ತಿಳಿಸಲಾಗಿದೆ.

ಈ ರೀತಿಯ ಪದ್ಧತಿ ಜಾರಿಗೆ ತರುವ ಸಲುವಾಗಿ ಸಂಸತ್ತಿನ ಅವಧಿಗೆ ಸಂಬಂಧಿಸಿದ ಸಂವಿಧಾನದ 83ನೇ ವಿಧಿ ಹಾಗೂ ರಾಜ್ಯ ವಿಧಾನಸಭೆಗಳ ಅವಧಿಗೆ ಸಂಬಂಧಿಸಿದ 172ನೇ ವಿಧಿಗೆ ತಿದ್ದುಪಡಿ ತರಬೇಕಿದೆ. ಈ ರೀತಿಯ ಸಂವಿಧಾನ ತಿದ್ದುಪಡಿಗೆ ರಾಜ್ಯಗಳ ಒಪ್ಪಿಗೆ ಅಗತ್ಯವಿಲ್ಲ ಎಂದು ಸಮಿತಿ ಹೇಳಿದೆ. ರಾಜ್ಯ ಚುನಾವಣಾ ಅಧಿಕಾರಿಗಳ ಜೊತೆ ಚರ್ಚಿಸುವ ಮೂಲಕ ಏಕರೂಪದ ಮತದಾರರ ಗುರುತಿನ ಚೀಟಿ ರೂಪಿಸಬೇಕು ಎಂದೂ ಸಮಿತಿ ಶಿಫಾರಸ್ಸು ಮಾಡಿದೆ.

ಪ್ರಸಕ್ತ ಲೋಕಸಭಾ ಚುನಾವಣೆಗೆ ಭಾರತೀಯ ಚುನಾವಣಾ ಆಯೋಗ ಮತದಾರರ ಪಟ್ಟಿ ಸಿದ್ಧಪಡಿಸುತ್ತದೆ. ಸ್ಥಳೀಯ ಸಂಸ್ಥೆಗಳ ಚುನಾವಣಾ ಮತದಾರರ ಪಟ್ಟಿಯನ್ನು ರಾಜ್ಯ ಚುನಾವಣಾ ಆಯೋಗ ರೂಪಿಸುತ್ತದೆ.

ಏಕಕಾಲಕ್ಕೆ ಚುನಾವಣೆ ನಡೆಸಲು ಸಮಿತಿ ಹಲವಾರು ಶಿಫಾರಸ್ಸುಗಳನ್ನು ಮಾಡಿದೆ. ಇವುಗಳಲ್ಲಿ ಬಹುತೇಕ ಶಿಫಾರಸ್ಸುಗಳಿಗೆ ರಾಜ್ಯಗಳ ಸಮ್ಮತಿಯ ಅಗತ್ಯವಿಲ್ಲ.

ಪ್ರತಿ ವರ್ಷ ಹಲವಾರು ಚುನಾವಣೆಗಳು ನಡೆಯುತ್ತವೆ. ಇದರಿಂದ ಸರ್ಕಾರ, ವಹಿವಾಟು, ಕಾರ್ಮಿಕರು, ನ್ಯಾಯಾಲಯ, ರಾಜಕೀಯ ಪಕ್ಷದ ಅಭ್ಯರ್ಥಿಗಳು ಹಾಗೂ ಒಟ್ಟಾರೆ ನಾಗರಿಕ ಸಮಾಜಕ್ಕೆ ಹೊರೆಯಾಗುತ್ತಿದೆ ಎಂದು ಸಮಿತಿ ಹೇಳಿದೆ.

ಏಕಕಾಲಕ್ಕೆ ಚುನಾವಣೆ ನಡೆಸಲು ಸರ್ಕಾರ ಸೂಕ್ತ ರೀತಿಯ ವ್ಯವಸ್ಥೆ ರೂಪಿಸಬೇಕು ಎಂದು ತಿಳಿಸಲಾಗಿದೆ.

ಸಂವಿಧಾನದ ಸ್ಫೂರ್ತಿಗೆ ಅನುಗುಣವಾಗಿ ಹಾಗೂ ಸಂವಿಧಾನಕ್ಕೆ ಕನಿಷ್ಠ ತಿದ್ದುಪಡಿ ತರುವ ರೀತಿಯಲ್ಲಿ ಏಕಕಾಲದ ಚುನಾವಣೆಯ ವ್ಯವಸ್ಥೆ ಜಾರಿಗೆ ತರಬೇಕು ಎಂದು ಶಿಫಾರಸ್ಸಿನಲ್ಲಿ ಹೇಳಲಾಗಿದೆ.

ಕೋವಿಂದ್ ನೇತೃತ್ವದ ಸಮಿತಿಯಲ್ಲಿ ಗೃಹ ಸಚಿವ ಅಮಿತ್ ಷಾ, ಹಣಕಾಸು ಆಯೋಗದ ಮಾಜಿ ಅಧ್ಯಕ್ಷ ಎನ್.ಕೆ. ಸಿಂಗ್, ಲೋಕಸಭೆ ಮಾಜಿ ಪ್ರಧಾನ ಕಾರ್ಯದರ್ಶಿ ಸುಭಾಷ್ ಕಶ್ಯಪ್, ರಾಜ್ಯಸಭೆಯಲ್ಲಿ ಪ್ರತಿಪಕ್ಷದ ಮಾಜಿ ನಾಯಕ ಗುಲಾಂ ನಬಿ ಆಜಾದ್ ಹಾಗೂ ಕಾನೂನು ಸಚಿವ ಅರ್ಜುನ್ ಮೆಘ್ವಾಲ್ ಸದಸ್ಯರಾಗಿದ್ದಾರೆ. ಸಮಿತಿ ರಾಷ್ಟ್ರಪತಿ ಭವನಕ್ಕೆ ತೆರಳಿ ತನ್ನ ವರದಿ ಸಲ್ಲಿಸಿದೆ.

ಸಮಿತಿಯು 191 ದಿನಗಳಲ್ಲಿ ತನ್ನ ವರದಿ ಸಲ್ಲಿಸಿದೆ. ಸೆಪ್ಟೆಂಬರ್ 2, 2023ರಲ್ಲಿ ಸಮಿತಿ ರಚಿಸಲಾಗಿತ್ತು.

ಏಕಕಾಲಕ್ಕೆ ಚುನಾವಣೆ ನಡೆಸುವುದನ್ನು ಪ್ರಧಾನ ಮಂತ್ರಿ ನರೇಂದ್ರ ಮೋದಿ ಬೆಂಬಲಿಸಿದ್ದಾರೆ. ಒಂದು ದೇಶ - ಒಂದು ಚುನಾವಣೆಯಿಂದ ದೇಶದ ಅಭಿವೃದ್ಧಿಗೆ ನೆರವಾಗುತ್ತದೆ ಎಂದವರು ಅಭಿಪ್ರಾಯ ಪಟ್ಟಿದ್ದಾರೆ.

## ಮೂವರು ಮಾಜಿ ನ್ಯಾಯಮೂರ್ತಿಗಳ ಆಕ್ಷೇಪ

ನವದೆಹಲಿ, ಮಾ. 14 – ಏಕಕಾಲಕ್ಕೆ ಚುನಾವಣೆ ನಡೆಸುವುದರ ಬಗ್ಗೆ ಹೈಕೋರ್ಟ್‌ನ ಮೂವರು ಮಾಜಿ ನ್ಯಾಯಮೂರ್ತಿಗಳು ಹಾಗೂ ಓರ್ವ ಮಾಜಿ ಚುನಾವಣಾ ಆಯುಕ್ತರು ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಮಾಜಿ ರಾಷ್ಟ್ರಪತಿ ರಾಮ ನಾಥ ಕೋವಿಂದ್ ಅವರ ನೇತೃತ್ವ ಉನ್ನತ ಹಂತದ ಸಮಿತಿ ಎದುರು ಇವರು ತಮ್ಮ ಆಕ್ಷೇಪ ದಾಖಲಿಸಿದ್ದಾರೆ.

ಸುಪ್ರೀಂ ಕೋರ್ಟ್ ಮಾಜಿ ಮುಖ್ಯ ನ್ಯಾಯಮೂರ್ತಿಗಳಾದ ದೀಪಕ್ ಮಿಶ್ರ, ನ್ಯಾಯಮೂರ್ತಿ ರಂಜನ್ ಗೊಗೊಯ್, ನ್ಯಾಯಮೂರ್ತಿ ಶರದ್ ಅರವಿಂದ ಬೊಬ್ಡೆ ಹಾಗೂ ನ್ಯಾಯಮೂರ್ತಿ ಯು.ಯು. ಲಲಿತ್ ಅವರು ಏಕಕಾಲಕ್ಕೆ ಚುನಾವಣೆ ನಡೆಸುವುದನ್ನು ಬೆಂಬಲಿಸಿದ್ದಾರೆ.

ಹೈಕೋರ್ಟ್‌ಗಳ ಒಂಭತ್ತು ಮಾಜಿ ಮುಖ್ಯ ನ್ಯಾಯಮೂರ್ತಿಗಳು ಏಕಕಾಲಕ್ಕೆ ಚುನಾವಣೆ ನಡೆಸುವುದನ್ನು ಬೆಂಬಲಿಸಿದ್ದಾರೆ.

ಆದರೆ, ಏಕಕಾಲಕ್ಕೆ ಚುನಾವಣೆ ನಡೆಸುವು ದರಿಂದ ಪ್ರಜಾಸತ್ತಾತ್ಮಕ ಭಾವನೆಗಳನ್ನು ಹತ್ತಿಕ್ಕಿ ದಂತಾಗುತ್ತದೆ. ರಾಜಕೀಯ ಉತ್ತರದಾಯಿತ್ವಕ್ಕೆ ಹಿನ್ನಡೆಯಾಗುತ್ತದೆ ಎಂದು ದೆಹಲಿ ಹೈಕೋರ್ಟ್ ಮಾಜಿ ಮುಖ್ಯ ನ್ಯಾಯಮೂರ್ತಿ ಅಜಿತ್ ಪ್ರಕಾಶ್ ಷಾ ಹೇಳಿದ್ದಾರೆ.

ಕಲ್ಕತ್ತಾ ಹೈಕೋರ್ಟ್ ಮಾಜಿ ಮುಖ್ಯ ನ್ಯಾಯಮೂರ್ತಿ ಗಿರೀಶ್ ಚಂದ್ರ ಗುಪ್ತ ಹಾಗೂ ಮದ್ರಾಸ್ ಹೈಕೋರ್ಟ್ ನಿವೃತ್ತ ಮುಖ್ಯ ನ್ಯಾಯಮೂರ್ತಿ ಸಂಜಿಬ್ ಬ್ಯಾನರ್ಜಿ ಅವರೂ ಏಕಕಾಲಕ್ಕೆ ಚುನಾವಣೆ ನಡೆಸುವುದನ್ನು ವಿರೋಧಿಸಿದ್ದಾರೆ.

ಏಕಕಾಲಕ್ಕೆ ಚುನಾವಣೆ ನಡೆಸುವಾಗ ಸಿಬ್ಬಂದಿಯ ಕೊರತೆ ಎದುರಾಗಬಹುದು ಎಂದೂ ಹಲವರು ಕಳವಳ ವ್ಯಕ್ತಪಡಿಸಿದ್ದಾರೆ.

## ಹಳೆಯ ಪದ್ಧತಿಗೆ ಮರಳಲು ಶಿಫಾರಸ್ಸು

ನವದೆಹಲಿ, ಮಾ. 14 – 1983ರಿಂದಲೂ ಹಲವಾರು ಸಮಿತಿಗಳು ಏಕಕಾಲಕ್ಕೆ ಚುನಾವಣೆಗಳನ್ನು ನಡೆಸುವ ಬಗ್ಗೆ ವರದಿಗಳನ್ನು ಸಲ್ಲಿಸಿವೆ. ಏಕಕಾಲಕ್ಕೆ ಚುನಾವಣೆ ನಡೆಸುವ ಹಳೆಯ ಪದ್ಧತಿಗೆ ಮರಳಬೇಕು ಎಂದು ಮಾಜಿ ರಾಷ್ಟ್ರಪತಿ ರಾಮ ನಾಥ ಕೋವಿಂದ್ ಅವರ ನೇತೃತ್ವದ ಸಮಿತಿ ಶಿಫಾರಸ್ಸು ಮಾಡಿದೆ.

ಈ ಹಿಂದೆ ಸಲ್ಲಿಸಲಾದ ಹಲವಾರು ವರದಿಗಳು ಹಾಗೂ ಅಧ್ಯಯನಗಳು ಏಕಕಾಲಕ್ಕೆ ಚುನಾವಣೆ ನಡೆಸುವ ಪರಿಕಲ್ಪನೆ ಮುಂದಿಟ್ಟಿವೆ. 1983ರಲ್ಲಿ ಚುನಾವಣಾ ಆಯೋಗವು ಏಕಕಾಲಕ್ಕೆ ಚುನಾವಣೆ ನಡೆಸುವ ಬಗ್ಗೆ ತನ್ನ ವಾರ್ಷಿಕ ವರದಿಯಲ್ಲಿ ತಿಳಿಸಿತ್ತು ಎಂದು ಕೋವಿಂದ್ ನೇತೃತ್ವದ ವರದಿಯಲ್ಲಿ ಹೇಳಲಾಗಿದೆ.

ಕಾನೂನು ಆಯೋಗ ಸಹ ಈ ಬಗ್ಗೆ ಅಧ್ಯಯನ ನಡೆಸಿ 1999, 2015 ಹಾಗೂ 2018ರ ಕರಡಿನಲ್ಲಿ ಶಿಫಾರಸ್ಸು ಮಾಡಿದೆ.

2002ರಲ್ಲಿ ಸಂವಿಧಾನ ಕಾರ್ಯನಿರ್ವಹಣೆ ಕುರಿತು ರೂಪಿಸಲಾದ ರಾಷ್ಟ್ರೀಯ ಆಯೋಗ ಸಹ ಪ್ರತ್ಯೇಕ ಚುನಾವಣೆಗಳಿಂದ ಆಗುತ್ತಿರುವ ಹೊರೆಗಳ ಬಗ್ಗೆ ತಿಳಿಸಿದೆ. ಸಂಸತ್ತಿನ ಸಿಬ್ಬಂದಿ ಕುರಿತ ಸ್ಥಾಯಿ ಸಮಿತಿ, ಕಾನೂನು ಹಾಗೂ ನ್ಯಾಯ ಸಮಿತಿಗಳೂ ಸಹ ಏಕಕಾಲದ ಚುನಾವಣೆ ಬಗ್ಗೆ 2015ರಲ್ಲಿ ವರದಿಗಳನ್ನು ಸಲ್ಲಿಸಿವೆ. ಏಕಾಲಕ್ಕೆ ಚುನಾವಣೆ ನಡೆಸುವುದರಿಂದ ಭಾರತ ಉನ್ನತ ವೇಗದ ಅಭಿವೃದ್ಧಿಯ ಕಡೆ ಹೆಜ್ಜೆ ಹಾಕಲು ನೆರವಾಗಲಿದೆ ಎಂದು ತಿಳಿಸಲಾಗಿದೆ.

## ದಾವಣಗೆರೆಯೇ ನನ್ನ ಕುಟುಂಬ, ಗೆಲ್ಲುವ ವಿಶ್ವಾಸವಿದೆ



**ಬಿಜೆಪಿ ಲೋಕಸಭಾ ಸ್ಥಾನದ ಅಭ್ಯರ್ಥಿ ಗಾಯತ್ರಿ ಸಿದ್ದೇಶ್ವರ**

ದಾವಣಗೆರೆ, ಮಾ. 14 - ಇದುವರೆಗೂ ನಾನು ನನ್ನ ಕುಟುಂಬದ ಸೇವೆ ಮಾಡುತ್ತಾ ಬಂದಿದ್ದೆ. ಇನ್ನು ಮುಂದೆ ದಾವಣಗೆರೆಯೇ ನನ್ನ ಕುಟುಂಬವಾಗಿದೆ. ದಾವಣಗೆರೆ ಲೋಕಸಭಾ ಕ್ಷೇತ್ರಕ್ಕೆ ಸೇವೆ ಸಲ್ಲಿಸುತ್ತೇನೆ ಎಂದು ಬಿಜೆಪಿಯ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಿರುವ ಗಾಯತ್ರಿ ಸಿದ್ದೇಶ್ವರ ಹೇಳಿದರು.

ನಗರದ ಬಿಜೆಪಿ ಕಚೇರಿಯಲ್ಲಿ ಇಂದು ಆಯೋಜಿಸಲಾಗಿದ್ದ ವಿಕಸಿತ ಭಾರತ ಸಂಕಲ್ಪ ಪತ್ರ ಸಲಹಾ ಅಭಿಯಾನದಲ್ಲಿ ಅವರು ಮಾತನಾಡಿದರು.

ಮುಂಬರುವ ಚುನಾವಣೆಯಲ್ಲಿ ಕಾರ್ಯಕರ್ತರು ಹಾಗೂ ದಾವಣಗೆರೆ ಜನರ ಬೆಂಬಲ - ಆಶೀರ್ವಾದಿಂದ ಗೆಲ್ಲುವ ವಿಶ್ವಾಸ ಇದೆ. ಜನರ ಆಶೀರ್ವಾದದಿಂದ ತಾವರೆ ಹೂವು ಮುಡಿದು ದೆಹಲಿಗೆ ಹೋಗುತ್ತೇನೆ ಎಂದವರು ವಿಶ್ವಾಸ ವ್ಯಕ್ತಪಡಿಸಿದರು.

ಲೋಕಸಭೆಯಲ್ಲಿ ಏನೇ ಕೆಲಸ ಇದ್ದರು ಸಂಸದರ (ಪತಿ ಜಿ.ಎಂ.ಸಿದ್ದೇಶ್ವರ) ಬಳಿ ಕೇಳಿ ಮಾಡಿ ಕೊಡುತ್ತೇನೆ. ಅವರೂ ಜೊತೆಯಲ್ಲಿ ಇರುತ್ತಾರೆ. ಅವರೆಲ್ಲೂ ಹೋಗುವುದಿಲ್ಲ. ಅವರು ಹೇಳಿದ್ದನ್ನು ನಾನು ಮಾಡುತ್ತೇನೆ ಎಂದು ತಿಳಿಸಿದರು.

ಕಳೆದ 28 ವರ್ಷಗಳಿಂದ ಚುನಾವಣೆಯಲ್ಲಿ ಓಡಾಡಿದ್ದೇನೆ. ಈ ಸಭೆಯಲ್ಲಿರುವವರ ಮುಖ ಪರಿಚಯ ಚೆನ್ನಾಗಿದೆ, ಆದರೆ ಒಬ್ಬರನ್ನು ಬಿಟ್ಟು ಉಳಿದವರ ಹೆಸರು ಸರಿಯಾಗಿ ಗೊತ್ತಿಲ್ಲ ಎಂದೂ ಅವರು ತಿಳಿಸಿದರು.

ಈ ಹಿಂದೆ ಚುನಾವಣಾ ಪ್ರಚಾರದ ಸಮಯದಲ್ಲಿ ಹಳ್ಳಿಗಳಿಗೆ ಹೋಗಿದ್ದು ಬಿಟ್ಟರೆ, ಮತ್ತೆ ಮನೆ ಸೇರಿಕೊಳ್ಳುತ್ತಿದ್ದೆ. ರಾಜಕೀಯವಾಗಿ ನನಗೇನೂ ಗೊತ್ತಿಲ್ಲ. ಮನೆ ವ್ಯವಹಾರ, ತೋಟ, ಇತ್ಯಾದಿ ಜವಾಬ್ದಾರಿ ನೋಡಿಕೊಳ್ಳುತ್ತಿದ್ದೆ ಎಂದೂ ಗಾಯತ್ರಿ ಹೇಳಿದರು.

ಈಗ ರಾಷ್ಟ್ರ ನಾಯಕರು ನನಗೆ ದೇಶ ಸೇವೆಯ ಅವಕಾಶ ನೀಡಿದ್ದಾರೆ. ಇದುವರೆಗೂ ಸಣ್ಣ ಕುಟುಂಬದ ಸೇವೆ ಮಾಡುತ್ತಿದ್ದ ನಾನು, ದಾವಣಗೆರೆ ಎಂಬ ಕುಟುಂಬದ ಸೇವೆ ಸಲ್ಲಿಸುತ್ತೇನೆ. ಪ್ರಧಾನಿ ಮೋದಿ ಅವರಿಗೆ ರಾಷ್ಟ್ರವೇ ಕುಟುಂಬವಾಗಿದ್ದರೆ, ನನಗೆ ದಾವಣಗೆರೆ ಕುಟುಂಬವಾಗಿರಲಿದೆ ಎಂದು ಹೇಳಿದರು.

ನಮ್ಮ ಮಾವನವರು 7 ವರ್ಷ ಸಂಸದರಾಗಿದ್ದರು. ಪತಿ ಸಿದ್ದೇಶ್ವರ ಅವರು 20 ವರ್ಷ ಸೇವೆ ಸಲ್ಲಿಸಿದ್ದಾರೆ. ಇದಕ್ಕೆ ನಿಮ್ಮೆಲ್ಲರ ಆಶೀರ್ವಾದ ಕಾರಣ. ಈ ಬಾರಿ ರಾಷ್ಟ್ರ ನಾಯಕರು ಹೆಣ್ಣು ಮಕ್ಕಳಿಗೆ ಅವಕಾಶ ನೀಡಬೇಕು ಎಂಬ ಕಾರಣದಿಂದ ನನಗೆ ಅವಕಾಶ ಕೊಟ್ಟಿದ್ದಾರೆ. ಚಾಚೂ ತಪ್ಪದೆ, ಕಳಂಕ ಬರದಂತೆ ಕಾರ್ಯನಿರ್ವಹಿಸುತ್ತೇನೆ ಎಂದವರು ಭರವಸೆ ನೀಡಿದರು.

**ರಂಜಾನ್ ರೋಜಾ ಟೈಮ್**

ದಿನಾಂಕ : 15-03-2024
ಇಫ್ತಾರ್ - 6 - 42
ದಿನಾಂಕ -16-03-2024
ಸಹೇರಿ - 5 - 15

## ನಗರದಲ್ಲಿ ಇಂದು ಜನ್ಮದಾತರಿಗೊಂದು ನಮನ ಕಾರ್ಯಕ್ರಮ

ಶ್ರೀ ಸೋಮೇಶ್ವರ ವಿದ್ಯಾಲಯದಲ್ಲಿ ಇಂದು ಸಂಜೆ 5.45 ಕ್ಕೆ 'ಜನ್ಮಭೂಮಿ ಮತ್ತು ಜನ್ಮದಾತರಿಗೊಂದು ನಮನ' ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ. ತರಳಬಾಳು ಜಗದ್ಗುರು ಶ್ರೀ ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಲಿ ದ್ದಾರೆ. ಮಾಜಿ ಸಚಿವ ಎಸ್.ಎ. ರವೀಂದ್ರನಾಥ್ ಕಾರ್ಯಕ್ರಮ ಉದ್ಘಾಟಿಸಲಿದ್ದು, ವಾಗ್ಮಿ ಮೈಸೂರಿನ ಪ್ರೊ. ಕೃಷ್ಣೇಗೌಡ ದಿಕ್ಸೂಚಿ ಭಾಷಣ ಮಾಡಲಿದ್ದಾರೆ.

## ನಗರದ ಎಂ.ಎಂ. ಶಿಕ್ಷಣ ವಿದ್ಯಾಲಯದಲ್ಲಿ ಇಂದು ತಾಲ್ಲೂಕು ಕಸಾಪ ದತ್ತಿ ಉಪನ್ಯಾಸ

ದಾವಣಗೆರೆ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ವತಿಯಿಂದ ಹಿರಿಯ ನಾಗರಿಕರ ಸಹಾಯವಾಣಿ ಇವರ ಸಹಯೋಗದಲ್ಲಿ ಇಂದು ಬೆಳಿಗ್ಗೆ 10.30ಕ್ಕೆ ಎಂ.ಎಂ. ಶಿಕ್ಷಣ ಮಹಾವಿದ್ಯಾಲಯದ ಆವರಣದಲ್ಲಿ ಶಾಲಾ - ಕಾಲೇಜು ಅಂಗಳದಲ್ಲಿ ಸಾಹಿತ್ಯೋತ್ಸವದ ಅಂಗವಾಗಿ ದತ್ತಿ ಉಪನ್ಯಾಸ ಕಾರ್ಯಕ್ರಮ ನಡೆಯಲಿದೆ.

ಎಂ.ಎಂ. ಶಿಕ್ಷಣ ಮಹಾವಿದ್ಯಾಲಯದ ಪ್ರಾಚಾರ್ಯ ಡಾ. ಕೆ.ಟಿ. ನಾಗರಾಜ ನಾಯ್ಕ ಅಧ್ಯಕ್ಷತೆ ವಹಿಸುವರು. ಎಸ್.ಎಂ.ಬಿ. ಶಿಕ್ಷಣ ಮಹಾವಿದ್ಯಾಲಯದ ಉಪನ್ಯಾಸಕರಾದ ಡಾ. ಅನಿತಾ ದೊಡ್ಡಗೌಡ್ರು ಅವರು ವಚನ ಚಳುವಳಿಯಲ್ಲಿ ಮಹಿಳಾ ಅಸ್ಮಿತೆ ವಿಷಯವಾಗಿ ಉಪನ್ಯಾಸ ನೀಡಲಿದ್ದಾರೆ.

ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷರಾದ ಶ್ರೀಮತಿ ಸುಮತಿ ಜಯಪ್ಪ ಹಾಗೂ ಹಿರಿಯ ನಾಗರಿಕರ ಸಹಾಯವಾಣಿ ಸಂಯೋಜಕ ನವೀನ್ ಕುಮಾರ್ ಅವರು ಉಪಸ್ಥಿತರಿರುವರು. ತಾಲ್ಲೂಕು ಕಸಾಪ ನಿರ್ದೇಶಕ ಷಡಾಕ್ಷರಪ್ಪ ಎಂ. ಬೇತೂರು ಪ್ರಾಸ್ತಾವಿಕ ನುಡಿಗಳನ್ನಾಡಲಿದ್ದಾರೆ.

ಕಾರ್ಯಕ್ರಮದಲ್ಲಿ ಶ್ರೀಮತಿ ಸರ್ವಮಂಗಳಮ್ಮ ಮಹಾಶರಣ ಮಾಗನೂರು ಬಸಪ್ಪ ದತ್ತಿಯನ್ನು ದತ್ತಿ ದಾನಿಗಳಾದ ಶ್ರೀಮತಿ ಸುನಂದಾದೇವಿ ಎಂ.ಬಿ. ಸಂಗಮೇಶ್ವರಗೌಡ್ರ, ಶರಣ ಮಾಗನೂರು ರಾಜಶೇಖರಗೌಡ್ರು ದತ್ತಿಯನ್ನು ದತ್ತಿ ದಾನಿಗಳಾದ ಶ್ರೀಮತಿ ಸುಲೋಚನಮ್ಮ ಮಾಗನೂರು ರಾಜಶೇಖರಗೌಡರು ಮತ್ತು ಸಿದ್ದನಮಠ ದಿ. ನಾಡಿಗೇರ ಬಸಪ್ಪ ಶ್ರೀಮತಿ ಕಮಲಮ್ಮ ದತ್ತಿಯನ್ನು ನಿವೃತ್ತ ಪ್ರಾಚಾರ್ಯ ಎಸ್.ಬಿ. ರಂಗನಾಥ ಅವರು ನಡೆಸಿಕೊಡುವರು.

## ಅಶ್ಲೀಲ ಮಾಹಿತಿ : 18 ಒಟಿಟಿಗಳ ವಿರುದ್ಧ ಕ್ರಮ

ನವದೆಹಲಿ, ಮಾ. 14 – ಅಶ್ಲೀಲ ಹಾಗೂ ಅಸಭ್ಯ ಮಾಹಿತಿಗಳನ್ನು ಪ್ರಕಟಿಸಿದ 18 ಒ.ಟಿ.ಟಿ. ಹಾಗೂ ಸಾಮಾಜಿಕ ಜಾಲತಾಣ ಖಾತೆಗಳ ವಿರುದ್ಧ ಕ್ರಮ ತೆಗೆದುಕೊಂಡಿರುವುದಾಗಿ ಕೇಂದ್ರ ಸರ್ಕಾರ ತಿಳಿಸಿದೆ. 18 ಒ.ಟಿ.ಟಿ.ಗಳು, 19 ವೆಬ್ ತಾಣಗಳು, 10 ಆಪ್‌ಗಳು ಹಾಗೂ 57 ಸಾಮಾಜಿಕ ಜಾಲ ತಾಣ ಖಾತೆ ಗಳನ್ನು ನಿಷ್ಕ್ರಿಯಗೊಳಿಸಲಾಗಿದೆ ಎಂದು ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯದ ವರದಿಯಲ್ಲಿ ತಿಳಿಸಲಾಗಿದೆ.

## ಕೈದಾಳೆ ಗ್ರಾಮದಲ್ಲಿ ಇಂದು

ದಾವಣಗೆರೆ ತಾಲ್ಲೂಕಿನ ಕೈದಾಳೆ ಗ್ರಾಮದ ಶ್ರೀ ಮಲ್ಲಿಕಾರ್ಜುನ ಸ್ವಾಮಿಯ ಮಹಾ ರಥೋತ್ಸವದ ಅಂಗವಾಗಿ ಇಂದು ಸಂಜೆ 5 ಗಂಟೆಗೆ ದಿಬ್ಬಣ ಕಾರ್ಯಕ್ರಮ ಜರುಗಲಿದೆ.

## ಹಳ್ಳಿಹಾಳ್ : ನಾಳೆ ರಥೋತ್ಸವ

ಮಲೇಬೆನ್ನೂರು ಮಾ. 4 - ಹಳ್ಳಿಹಾಳ್ ಗ್ರಾಮದ ಶ್ರೀಮುರುಡ ಬಸವೇಶ್ವರ ದೇವರ ರಥೋತ್ಸವವು ನಾಳೆ ದಿನಾಂಕ 16ರ ಶನಿವಾರ ಸಾಯಂಕಾಲ 4.30ಕ್ಕೆ ಜರುಗಲಿದೆ. ರಥೋತ್ಸವ ಅಂಗವಾಗಿ ಶುಕ್ರವಾರ ಬೆಳಿಗ್ಗೆ 8 ಗಂಟೆಗೆ ಗಜ ಉತ್ಸವ ನಡೆಯಲಿದೆ ಎಂದು ಗ್ರಾಮದ ಹೆಚ್. ವೀರನಗೌಡ ಯು. ಎನ್. ಶಿವನಗೌಡ ತಿಳಿಸಿದ್ದಾರೆ.

## ಪೆಟ್ರೋಲ್, ಡೀಸೆಲ್ ಬೆಲೆ 2 ರೂ. ಕಡಿತ

ನವದೆಹಲಿ, ಮಾ. 14 – ಪೆಟ್ರೋಲ್ ಹಾಗೂ ಡೀಸೆಲ್ ಬೆಲೆಗಳನ್ನು 2 ರೂ.ಗಳಷ್ಟು ಕಡಿತಗೊಳಿಸಲಾಗಿದೆ. ಎರಡು ವರ್ಷಗಳಿಂದ ಸರ್ಕಾರಿ ಸ್ವಾಮ್ಯದ ತೈಲ ಕಂಪನಿಗಳು ಬೆಲೆ ಪರಿಷ್ಕರಣೆ ನಿಲ್ಲಿಸಿದ್ದವು. ಚುನಾವಣಾ ಘೋಷಣೆ ಸನಿಹದಲ್ಲಿರುವಾಗಲೇ ಬೆಲೆ ಇಳಿಕೆ ಮಾಡಲಾಗಿದೆ.

ಶುಕ್ರವಾರ ಬೆಳಿಗ್ಗೆ 6 ಗಂಟೆಯಿಂದ ಬೆಲೆ ಇಳಿಕೆ ಅನ್ವಯವಾಗಲಿದೆ. ಸ್ಥಳೀಯ ತೆರಿಗೆಗಳಿಗೆ ಅನುಗುಣವಾಗಿ ಬೆಲೆ ಇಳಿಕೆಯಲ್ಲಿ ವ್ಯತ್ಯಾಸವಾಗಲಿದೆ. ಕೆಲ ದಿನಗಳ ಹಿಂದಷ್ಟೇ ಅಡುಗೆ ಅನಿಲದ ಬೆಲೆಯನ್ನು ಸಿಲಿಂಡರ್‌ಗೆ 100 ರೂ.ಗಳಷ್ಟು ಇಳಿಕೆ ಮಾಡಲಾಗಿತ್ತು.

**Davangere CPE Study Chapter of SIRC of Institute of Chartered Accountants of India**
"CA Bhawan", Harihar Road, Davangere-577 006.

Is conducting half day seminar on RERA- Real Estate Regulatory Authority Act 2016 on 16-03-2024 Saturday at 9-30 AM in CA. Dr. A.S. Veeranna Auditorium, CA Bhawan, Davangere. Well known speaker will deliberate on the applicability of RERA with respect to residential apartments, buildings and plots. Consultants, Engineers, Builders, plot developers & Publics are requested to make use of this opportunity by registering name with the under mentioned.

CA.N.G. GIRISH NADIG CA. D.V. PRAVEEN
Convenor: 9448005003, Deputy, Convenor : 9844335545

ಶ್ರೀ ಗುರು ಮರುಳಸಿದ್ದೇಶ್ವರಸ್ವಾಮಿ ಸೇವಾ ಸಂಸ್ಥೆ (ರಿ.), ದಾವಣಗೆರೆ.
ಹಿಂದೂ ವಧು-ವರರ ಮಾಹಿತಿ ಕೇಂದ್ರ www.hindusmatrimony.com
SGM Tours **ಎಸ್‌ಜಿಎಂ ಟೂರ್ಸ್**
ಬಾಣಾಪುರಮಠ ಆಸ್ಪತ್ರೆ ಎದುರು, 8ನೇ ಮೇನ್, ಪಿ.ಜೆ. ಬಡಾವಣೆ, ದಾವಣಗೆರೆ.
ರೈಲು/ವಿಮಾನ ಮತ್ತು ಬಸ್ಸಿನಲ್ಲಿ
14 ದಿನಗಳು **ಚಾರ್‌ಧಾಮ್ ವಿಶೇಷ ಯಾತ್ರೆ** ಮೇ 2024 ರಿಂದ
(ರಾಜ್ಯ ಧಾರ್ಮಿಕ ದತ್ತಿ ಇಲಾಖೆಯಿಂದ ರೂ. 20,000 ಸಬ್ಸಿಡಿ ಇರುತ್ತದೆ)
ಸಂದರ್ಶಿಸುವ ಸ್ಥಳಗಳು : ದೆಹಲಿ, ಹರಿದ್ವಾರ, ಋಷಿಕೇಶ, ಯಮುನೋತ್ರಿ, ಉತ್ತರಕಾಶಿ, ಗಂಗೋತ್ರಿ, ಗುಪ್ತಕಾಶಿ, ಕೇದಾರನಾಥ ಮತ್ತು ಬದರೀನಾಥ.
**ಕಾಶಿ ಯಾತ್ರೆ**
ಸಂದರ್ಶಿಸುವ ಸ್ಥಳಗಳು : ಕಾಶಿ, ಅಯೋಧ್ಯ, ಗಯಾ, ಬುದ್ಧಗಯಾ, ಪ್ರಯಾಗ್‌ರಾಜ್,
**ಅಮರ್‌ನಾಥ, ವೈಷ್ಣೋದೇವಿ ವಿಶೇಷ ಪ್ರವಾಸ** 4 ಜುಲೈ 2024 ರಿಂದ 9 ದಿನಗಳು
ಸಂದರ್ಶಿಸುವ ಸ್ಥಳಗಳು : ಜಮ್ಮು, ಕಟ್ರಾ, ವೈಷ್ಣೋದೇವಿ, ಅಮೃತ್‌ಸರ್
ಸಂಚಾಲಕರು : ವೇ|| ಲೋಕೇಶಯ್ಯ, ಎಂ. ಕೆಲವೇ ಸೀಟುಗಳು ಮಾತ್ರ ಲಭ್ಯ
78925 10652, 94481 59303, 80509 52637

**IN THE COURT OF THE THIRD ADDITIONAL CIVIL JUDGE AND JMFC, AT DAVANAGERE**

**Cr.Mis 283/2024**

**Petitioners : 1)** Sri. T.H. Umapathy, S/o. T. Hanumanthappa, Aged 58 years, Agriculturist, and Businessman, BASAPURA VILLAGE, Davanagere Taluk.

2) Sri. T.Revanasiddappa, S/o. T. Hanumanthappa, Aged 62 years, Agriculturist, BASAPURA VILLAGE, Davanagere Taluk.

3) Sri. T.H. Prakash, S/o. T. Hanumanthappa, Aged 55 years, Agriculturist, BASAPURA VILLAGE, Davanagere Taluk.

4) Smt. Girijamma, W/o. S.G. Mudegowdappa, Aged about 67 years, Housewife, Shiva Parvathi Layout, Shamanuru Extension, DAVANAGERE.

5) Smt. Siddamma, W/o. A.S. Basavarajappa, Aged about 68 years, Housewife, BASAPURA VILLAGE, Davanagere Taluk.

6) Smt. A.M. Indira, W/o. Sri. A. Mallikarjun, Aged about 63 years, Housewife, Door No. 2238/1A, 6th Main, 6th Cross, MCC `A' Block, DAVANAGERE.

**V/s**

**Respondents :** 1) City Corporation, Davanagere Represented by its Commissioner Poona-Bangalore Road, DAVANAGERE.

2) The Registrar of births and deaths, City Corporation. Poona- Bangalore Road, DAVANAGERE.

**PAPER PUBLICATION OF THE PETITION FILED BY THE PETITIONERS UNDER SECTION 13 OF THE REGISTRATION OF BIRTHS AND DEATHS ACT 1969**

Whereas, the above named petitioners have filed the petition against the respondents for an order to direct the respondents to register the death of Smt. Rudramma who passed away on 19.03.2022 and to issue the death certificate to the petitioners.

Now, the above case is posted to 18-04-2024 and anybody having any objections for the prayer made by the petitioners as stated above can appear on 18-04-2024 at 11:00 A.M. either personally or through an advocate and can have their say in the matter, failing which all further proceedings will take place in accordance with law.

Given under my hand and seal on 12.03.2024 Day of March 2024 at Davanagere.

Place : Davanagere
Date : 12.03.2024

By order of the court
Chief Ministerial Officer
Civil Judge and JMFC
Davanagere.

**ಜನ್ಮದಿನದ ಶುಭಾಶಯಗಳು**




ಜನ್ಮ ದಿನದ
ಶುಭಾಶಯಗಳು
ಇಂದು ತಮ್ಮ ಜನ್ಮದಿನದ ಸಂಭ್ರಮದಲ್ಲಿರುವ
ಎಸ್.ಎಸ್. ಕೇರ್ ಟ್ರಸ್ಟ್‌ನ ಲೈಫ್ ಟ್ರಸ್ಟಿಗಳೂ,
ದಾವಣಗೆರೆ ಜಿಲ್ಲೆಯ ಅಭಿವೃದ್ಧಿಯ ಕನಸು ಹೊತ್ತಿರುವ ಜನನಾಯಕಿ
ಶ್ರೀಮತಿ ಡಾ. ಪ್ರಭಾ ಮಲ್ಲಿಕಾರ್ಜುನ್
ಅವರಿಗೆ ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು.
ದೇವರು ಅವರಿಗೆ ಆಯುರಾರೋಗ್ಯ ಭಾಗ್ಯ, ಯಶಸ್ಸು ಹಾಗೂ ಜನ ಸೇವೆ ಮಾಡಲು
ಇನ್ನೂ ಹೆಚ್ಚಿನ ಶಕ್ತಿಯನ್ನು ಕರುಣಿಸಲಿ ಎಂದು ಆಶಿಸುತ್ತಿರುವ,
ಎಸ್.ಜಿ. ವೇದಮೂರ್ತಿ
ಶಾಮನೂರು
ಕಾಂಗ್ರೆಸ್
ಮುಖಂಡರು
ಅಣಬೇರು
ಸಂದೀಪ್
ಸಂಯೋಜಕರು
ಕೆಪಿಸಿಸಿ ಪ್ರಚಾರ ಸಮಿತಿ
ಧನ್ಯಕುಮಾರ್
ಶಾಮನೂರು
B-Tech, M.S (Germany)
ವ್ಯವಸ್ಥಾಪಕ ನಿರ್ದೇಶಕರು, ದೇವನಗರಿ
ಗ್ರೀನ್ ಪ್ಲಾನೆಟ್ ಇನ್ಫ್ರಾ ಪ್ರೈವೇಟ್ ಲಿಮಿಟೆಡ್


ಜನ್ಮದಿನದ
ಶುಭಾಶಯಗಳು
ಎಸ್.ಎಸ್. ಕೇರ್ ಟ್ರಸ್ಟ್ ಲೈಫ್ ಟ್ರಸ್ಟಿಗಳು
ಸರ್ವರಿಗೂ ಶಿಕ್ಷಣ ಹಾಗೂ ಆರೋಗ್ಯವನ್ನು
ಒದಗಿಸುವ ಉದ್ದೇಶ ಹೊಂದಿರುವ ನಮ್ಮ
ಜನನಾಯಕಿಯಾದ
ಶ್ರೀಮತಿ ಎಸ್.ಎಸ್. ಪ್ರಭಾ ಮಲ್ಲಿಕಾರ್ಜುನ
ಅವರಿಗೆ ಜನ್ಮದಿನದ ತುಂಬು ಹೃದಯದ
ಶುಭಾಶಯಗಳು. ಭಗವಂತನು ಶ್ರೀಯುತರಿಗೆ
ಆರೋಗ್ಯ, ನೆಮ್ಮದಿ, ಶಾಂತಿಯನ್ನು ಕರುಣಿಸಲಿ.
ಅನ್ವರ್ ಭಾಷಾ
ಉದ್ಯಮಿ, ತುರ್ಚಘಟ್ಟ.
ಸುರೇಶ್ ಪೈ
ಉದ್ಯಮಿ, ಯುವಮುಖಂಡರು.
ಎಸ್.ಎಸ್. ಹಾಗೂ ಎಸ್.ಎಸ್.ಎಂ. ಅಭಿಮಾನಿ ಬಳಗ.


ಹುಟ್ಟುಹಬ್ಬದ ಹಾರ್ದಿಕ ಶುಭಾಶಯಗಳು
ದಿನಾಂಕ: 17.03.2024 ರಂದು ತಮ್ಮ ಹುಟ್ಟುಹಬ್ಬ ಆಚರಿಸಿಕೊಳ್ಳುತ್ತಿರುವ
ಜಿಲ್ಲಾ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ
ಮಾಜಿ ಅಧ್ಯಕ್ಷರು, ನಗರಸಭೆ ದಾವಣಗೆರೆ, ಕಾಂಗ್ರೆಸ್ ಮುಖಂಡರು,
ಶ್ರೀ ದಿನೇಶ್ ಕೆ. ಶೆಟ್ಟಿ ಅವರಿಗೆ ಹುಟ್ಟುಹಬ್ಬದ ಶುಭಾಶಯಗಳು
ಶುಭಕೋರುವವರು
ಅನ್ವರ್ ಭಾಷಾ
ಬಿ. ದಾದಾಪೀರ್
ಸುರೇಶ್ ಪೈ
ಎಸ್.ಎಸ್. ಹಾಗೂ ಎಸ್.ಎಸ್.ಎಂ. ಅಭಿಮಾನಿಗಳು.